ಪರೋಪಕಾರಿ ಮತ್ತು ಪ್ರಭಾವಿ ಹೂಡಿಕೆದಾರರು:

ಖಾಸಗಿ ವಲಯದ ಪಾಲ್ಗೊಳ್ಳುವಿಕೆ, ಸಂಕರತೆ (hybridity) ಮತ್ತು ವ್ಯಾಖ್ಯಾನದ ಸಮಸ್ಯೆಗಳು

ಪ್ರಾಚಿ ಶ್ರೀವಾಸ್ತವ ಮತ್ತು ರಾಬಿನ್ ರೀಡ್

ಉದ್ದೇಶ

ಶಿಕ್ಷಣ ಕ್ಷೇತ್ರದಲ್ಲಿ ಖಾಸಗಿ ವಲಯದ ತೊಡಗುವಿಕೆಯನ್ನು ಸಾಮಾನ್ಯವಾಗಿ, ರಾಜ್ಯೇತರ ಖಾಸಗಿ ಕಾರ್ಯಭಾಗಿಗಳ ಮೂಲಕ ಶಿಕ್ಷಣ ಮತ್ತು ಶಿಕ್ಷಣದ ಸೇವೆಗಳ ಒದಗಿಸುವಿಕೆ ಎಂಬುದಾಗಿ ಪರಿಕಲ್ಪಿಸಲಾಗಿದೆ. ಇದು ಇಷ್ಟಕ್ಕೇ ಸೀಮಿತವಾಗಿಲ್ಲದೆ ನಾಲ್ಕು ಮುಖ್ಯ ಕ್ಷೇತ್ರಗಳಲ್ಲಿಯೂ ಸಂಭವನೀಯ ಅಂಶವಾಗಿದೆ. ಅಂದರೆ ಶಿಕ್ಷಣದ ಪೂರೈಕೆ, ವಿತ್ತಪೂರೈಕೆ (financing), ನಿರ್ವಹಣೆ ಮತ್ತು ನಿಯಂತ್ರಣ, ಹಾಗೂ ರಾಜ್ಯೇತರ ಖಾಸಗಿ ಕಾರ್ಯಭಾಗಿಗಳ ಮೂಲಕ ಪೂರಕ ಶಿಕ್ಷಣ ಸೇವೆಗಳ ವೃದ್ಧಿ. ಅವರು ಸರ್ಕಾರ/ಸಾರ್ವಜನಿಕ ಮತ್ತು/ಅಥವಾ ಇತರ ಖಾಸಗಿ/ಸರ್ಕಾರೇತರ ಕಾರ್ಯಭಾಗಿಗಳೊಂದಿಗೆ ವಿಭಿನ್ನ ಮಟ್ಟದ ಸ್ವಾತಂತ್ರದೊಂದಿಗೆ ಕಾರ್ಯನಿರ್ವಹಿಸಬಹುದು. ಜಾಗತಿಕ ಶಿಕ್ಷಣದಲ್ಲಿ ರಾಜ್ಯೇತರ ಖಾಸಗಿ ಕಾರ್ಯಭಾಗಿಗಳು ಮುಖ್ಯವಾಗಿ ಮೂರು ಪ್ರಮುಖ ಹಂತಗಳ ನಿರಂತರ ಕ್ರಮದಲ್ಲಿ ಕಾರ್ಯನಿರ್ವಹಿಸುತ್ತವೆ ಎಂದು ಹೇಳಬಹುದು. ಇವು ಲಾಭೋದ್ದೇಶಿತ ಅಥವಾ ವಾಣಿಜ್ಯೋದ್ಯಮದ ಸಂಸ್ಥೆಗಳಾಗಿರಬಹುದು. ಅವುಗಳಲ್ಲಿ ಕೆಲವು ಸಾರ್ವಜನಿಕವಾಗಿ ಪಟ್ಟಿಮಾಡಲ್ಪಟ್ಟಿರಬಹುದು (ಫೀಲ್ಡನ್ ಮತ್ತು ಲಾರೋಕ್, 2008). ಇತರ ಸಂಸ್ಥೆಗಳು ಲಾಭೋದ್ದೇಶವನ್ನೇ ಗುರಿಯಾಗಿಸಿಕೊಳ್ಳದೆ ಸಕಾರಾತ್ಮಕ ಸಾಮಾಜಿಕ ಪ್ರಭಾವವನ್ನು ಮೂಡಿಸುವುದನ್ನು ಉದ್ದೇಶವಾಗಿರಿಸಿಕೊಂಡಿರುತ್ತವೆ (ಉದಾಹರಣೆಗೆ, ಸ್ಥಾನೀಯ ಸಂದರ್ಭಗಳಲ್ಲಿ ಟ್ರಸ್ಟ್ ಅಥವಾ ದಾನ ಸಂಸ್ಥೆಗಳಾಗಿ ನೋಂದಾಯಿತವಾಗಿರಬಹುದು). ಹೈಬ್ರಿಡ್ ಕಾರ್ಯಭಾಗಿಗಳು ಈ ಎರಡರ ನಡುವೆ ಇದ್ದು, ಲಾಭ ಮತ್ತು ಸಾಮಾಜಿಕ ಪ್ರಭಾವ ಎರಡನ್ನೂ ಪಡೆಯುವ ಉದ್ದೇಶವಿಟ್ಟುಕೊಂಡಿರುತ್ತವೆ.

ಜಾಗತಿಕ ಶಿಕ್ಷಣದಲ್ಲಿ ರಾಜ್ಯೇತರ-ಖಾಸಗಿ ಕಾರ್ಯಭಾಗಿಗಳ ಸಂಖ್ಯೆ ಮತ್ತು ವ್ಯಾಪ್ತಿಯ ವೃದ್ಧಿಯ ಜೊತೆಗೆ, ಹೂಡಿಕೆ ತಂತ್ರಗಳ ವೈವಿಧ್ಯತೆಯು ತೀವ್ರಗೊಂಡಿರುವುದನ್ನು ಕಾಣಬಹುದು (ಭಾಂಜ್ 2008; ಡಿ. ಕ್ಯಾಪಿಟಲ್ ಪಾರ್ಟ್‌ನರ್ಸ್, 2013; ಸ್ಟೀರ್, ಗಿಲ್ಲಾರ್ಡ್, ಗುಸ್ತಾಫ್ಸನ್- ರೈಟ್ ಮತ್ತು ಲಾಥಮ್, 2015). ಹೂಡಿಕೆದಾರರು ಸಾಮಾಜಿಕ ಪ್ರಭಾವ ಮತ್ತು ಮಿಶ್ರ ಮೌಲ್ಯದ ಹೂಡಿಕೆ ಕಾರ್ಯತಂತ್ರಗಳ ಕಡೆಗೆ ಹೆಚ್ಚು ಗಮನಹರಿಸುತ್ತಿರುವುದರ ಪರಿಣಾಮವಾಗಿ ಹೈಬ್ರಿಡ್ ಕಾರ್ಯಭಾಗಿಗಳು ಮತ್ತು ಕಾರ್ಯತಂತ್ರಗಳಲ್ಲಿ ಆಸಕ್ತಿ ಹೆಚ್ಚು ತೀವ್ರವಾಗುತ್ತಿದೆ. ಅಂತಹ ಕಾರ್ಯಭಾಗಿಗಳ ವ್ಯಾಪ್ತಿಯೊಳಗೆ ಕೆಲವು ವಾಣಿಜ್ಯ ಮತ್ತು ಕಾರ್ಪರೆಟ್ ಸಂಸ್ಥೆಗಳೊಂದಿಗೆ ಹತ್ತಿರದ ಸಂಬಂಧವನ್ನು ಹೊಂದಿದವರೂ ಸೇರಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲಿ ಹೈಬ್ರಿಡ್ ಕಾರ್ಯಭಾಗಿಗಳೆಂದು ಪರಿಗಣಿಸಲ್ಪಡುವ ಅಥವಾ ಸಂಯೋಜಿತ ಕಾರ್ಯತಂತ್ರಗಳನ್ನು ಬಳಸುವ ರಾಜ್ಯೇತರ - ಖಾಸಗಿ

ಸಂಸ್ಥೆಗಳು ಈ ಮುಂದಿನವುಗಳನ್ನು ಒಳಗೊಂಡಿವೆ: ಖಾಸಗಿ ಪ್ರತಿಷ್ಠಾನಗಳು, (ಉದಾಹರಣೆಗೆ: ಸ್ವತಂತ್ರವಾಗಿ, ಪಾರಿವಾರಿಕವಾಗಿ, ಕಾರ್ಪರೆಟ್ ಹಾಗೂ ಖಾಸಗಿಯಾಗಿ ವಿತ್ತಪೋಷಿತಗೊಂಡ(funded) ಸಾಮುದಾಯಿಕ ಪ್ರತಿಷ್ಠಾನಗಳು); ಕಾರ್ಪರೆಟ್ ಸಾಮಾಜಿಕ ಉತ್ತರದಾಯಿತ್ವದ (ಸಿ.ಎಸ್.ಆರ್) ಘಟಕಗಳು; ಸಾಮಾಜಿಕ ಹೊಸತನವನ್ನು ಉತ್ತೇಜಿಸಲು ಹಣವನ್ನು ಒದಗಿಸುವವರು; ಪ್ರಭಾವಿ (ಪರಿಣಾಮಕಾರಿ) ಹೂಡಿಕೆದಾರರು; ಸಾಮಾಜಿಕ ಉದ್ದಿಮೆ ಸಂಘಟನೆಗಳು ಇತ್ಯಾದಿ.

ಈ ಗುಂಪಿನೊಳಗೆ, ಶಿಕ್ಷಣದ ಹಣಕಾಸು ಪೋಷಕರಾಗಿ ಕಾರ್ಯನಿರ್ವಹಿಸುವ ಖಾಸಗಿ ಪ್ರತಿಷ್ಠಾನಗಳು ಹಾಗೂ ಪ್ರಭಾವಿ ಹೂಡಿಕೆದಾರರತ್ತ ನಮ್ಮ ವಿಶೇಷ ಗಮನವಿದೆ. ನಮ್ಮ ಸಂಶೋಧನೆಯ ಪ್ರಕಾರ, ಖಾಸಗಿ ಪ್ರತಿಷ್ಠಾನಗಳನ್ನು 'ಶುದ್ಧ ಪ್ರಕಾರ'ದ ಪರೋಪಕಾರಿ ಕಾರ್ಯಭಾಗಿಗಳೆಂದು ಮತ್ತು ಸಾಮಾಜಿಕ ಪ್ರಭಾವಿ/ಪರಿಣಾಮಕಾರಿ (ಇಂಪ್ಯಾಕ್ಟ್ ಇನ್ವೆಸ್ಟರ್ಸ್) ಮತ್ತು ಮಿಶ್ರ ಮೌಲ್ಯದ ಹೂಡಿಕೆಯನ್ನು ಖಾಸಗಿ ವಲಯದ ಪರಿಣಾಮಕಾರಿ ಹೂಡಿಕೆದಾರರ ವಿಶೇಷ ಕ್ಷೇತ್ರವೆಂದು ವಿಭಜಿಸುವ ಕಲ್ಪನೆ ನಿಖರವೂ ಅಲ್ಲ ಮತ್ತು ಉಪಯುಕ್ತವೂ ಅಲ್ಲ. ಅಂತಹ ಕಾರ್ಯಭಾಗಿಗಳು ಬಳಸುವ ವಿಭಿನ್ನ ಕಾರ್ಯತಂತ್ರಗಳನ್ನು ಅಥವಾ ತಮ್ಮ ಕಾರ್ಯಗಳನ್ನು ವ್ಯವಸ್ಥಿತಗೊಳಿಸುವ ರೂಪಗಳನ್ನು ಇವು ಪರಿಗಣಿಸುವುದಿಲ್ಲ - ಅಂದರೆ, ಸಂಕ್ಷಿಪ್ತವಾಗಿ ಹೇಳುವುದಾದರೆ, ಅವು ಸಂಕರತೆಯ(hybridity) ಸ್ವಭಾವವನ್ನೇ ಗಮನದಲ್ಲಿಡುವುದಿಲ್ಲ,

ಈ ಸಮಸ್ಯೆಯನ್ನು ಮತ್ತಷ್ಟು ತೀವ್ರಗೊಳಿಸುವುದೇನೆಂದರೆ ಪ್ರಚಲಿತ ಸಾಹಿತ್ಯದಲ್ಲಿ ಬಳಸುವ ಪದ ಪ್ರಯೋಗ ಮತ್ತು ವ್ಯಾಖ್ಯಾನಗಳ ಬಗ್ಗೆ ಏಕಾಭಿಪ್ರಾಯದ ಒಮ್ಮತವಿಲ್ಲದಿರುವುದು. ಈ ಕಾರಣದಿಂದಾಗಿ ಸಂಶೋಧನೆ ನಡೆಸುವುದು ಒಂದು ದೊಡ್ಡ ಸವಾಲಾಗಿ ಪರಿಣಮಿಸಿದೆ (ಮಾರ್ಟಿನ್ & ವಿಟ್ಟೆ, 2008; ಸ್ಟೀರ್ ಇತ್ಯಾದಿ., 2015; ಯುನೈಟೆಡ್ ನೇಶನ್ಸ್ ಎಕನಾಮಿಕ್ ಅಂಡ್ ಸೋಷಿಯಲ್ ಕೌನ್ಸಿಲ್ ECOSOC), (2012); ಥೋರ್ನ್ಲೆ ಇತ್ಯಾದಿ., 2016). ಕಲ್ಪನಾತ್ಮಕತೆಯ ಕೊರತೆಯಿಂದಾಗಿ ದತ್ತಾಂಶಗಳಲ್ಲಿ ತಪ್ಪುಗಳು ಉಂಟಾಗಬಹುದು. ಆದರೆ ವರ್ಗೀಕರಣಾತ್ಮಕ ರೂಪರೇಷೆಗಳಿಲ್ಲದೆ ಹೋದರೆ ಅವುಗಳು ಮುಂದುವರಿಯುವ ಸಾಧ್ಯತೆಯಿದೆ (Höchstädter & Scheck, 2015), ಇದರಿಂದ ಅವರು ಶಿಕ್ಷಣಕ್ಕೆ ಸಂಬಂಧಿಸಿದಂತೆ ಹಣಕಾಸು ಕೊರತೆಯನ್ನು ನೀಗಿಸಲು ನೀಡುವ ಕೊಡುಗೆಯನ್ನು ಒಳಗೊಂಡಂತೆ ಅನೇಕ ಕ್ಷೇತ್ರಗಳಲ್ಲಿ, ನಿರ್ದಿಷ್ಟ ರೀತಿಯ ಕಾರ್ಯಭಾಗಿಗಳ ಪ್ರಭಾವವನ್ನು ಮೌಲ್ಯಮಾಪನ ಮಾಡುವಲ್ಲಿ ಗಂಭೀರ ಪರಿಣಾಮಗಳು ಉಂಟಾಗಬಹುದು.

ವಿವಿಧ ರೀತಿಯ ಸಂಸ್ಥೆಗಳನ್ನು ವರ್ಗೀಕರಿಸಲು ಉಪಯುಕ್ತವಾಗುವ, ಆದರೆ ಸಂಕರತೆಯನ್ನು ಗಮನಿಸುವಲ್ಲಿ ನಮ್ಯತೆಯನ್ನು ಒಳಗೊಂಡಿರುವ ರೂಪರೇಷೆಯನ್ನು ನಿರ್ಮಿಸುವುದು ಅಷ್ಟು ಸುಲಭದ ಕೆಲಸವಲ್ಲ. ಈ ಅಧ್ಯಾಯವು ಈ ಕೆಲವು ಕಲ್ಪನಾತ್ಮಕ ಕೊರತೆಗಳನ್ನು ನೀಗಿಸುವತ್ತ ಮೊದಲ ಹೆಜ್ಜೆಯನ್ನು ಇಡುತ್ತದೆ. ಇದು ಹಿನ್ನೆಲೆಯ ಕಲ್ಪನಾತ್ಮಕ ರೂಪುರೇಷೆಗಳಿಂದ

ಒಳನೋಟಗಳನ್ನು ಪ್ರಸ್ತುತಪಡಿಸುತ್ತದೆ. ಮತ್ತು ಇವುಗಳು ದಕ್ಷಿಣ ಏಷ್ಯಾ, ಪೂರ್ವ ಏಷ್ಯಾ ಹಾಗೂ ಫೆಸಿಫಿಕ್ ಪ್ರದೇಶಗಳಲ್ಲಿನ ಶಿಕ್ಷಣ ಕ್ಷೇತ್ರದ ರಾಜ್ಯೇತರ ಖಾಸಗಿ ಕಾರ್ಯಭಾಗಿಗಳ ಲಕ್ಷಿತ ಭೌಗೋಳಿಕ ಕ್ಷೇತ್ರಗಳು, ಶಿಕ್ಷಣಕ್ಕೆ ಸಂಬಂಧಿಸಿದ ವಲಯದ ಆದ್ಯತೆಗಳು ಹಾಗೂ ಶಿಕ್ಷಣದ ಉಪಕ್ರಮಗಳನ್ನು ನಿರೂಪಿಸುವ ವಿಸ್ತೃತ ಪ್ರಾದೇಶಿಕ ಮಟ್ಟದ ಯೋಜನೆಯನ್ನು ರೂಪಿಸುತ್ತದೆ[1]. ಏಷ್ಯಾದ ಶಿಕ್ಷಣ ಕ್ಷೇತ್ರದಲ್ಲಿ ಸಕ್ರಿಯವಾಗಿರುವ ಅನುದಾನದಾತರು/ಹೂಡಿಕೆದಾರರ ಪ್ರಾಯೋಗಿಕ ದತ್ತ ಸಂಚಯವನ್ನು ರೂಪಿಸಲು, ಐದು ಪ್ರಾದೇಶಿಕ ಹಾಗೂ ಜಾಗತಿಕ ಮೂಲಗಳಿಂದ ರಾಜ್ಯೇತರ ಖಾಸಗಿ ಕಾರ್ಯಭಾಗಿಗಳ ಮಾದರಿಯನ್ನು ಸಂಗ್ರಹಿಸಲಾಯಿತು.[2] ಸಂಗ್ರಹದಲ್ಲಿನ ಖಾಸಗಿ ಪ್ರತಿಷ್ಠಾನಗಳು ಮತ್ತು ಪ್ರಭಾವಿ ಹೂಡಿಕೆದಾರರ ಕುರಿತು ಸಾರ್ವಜನಿಕವಾಗಿ ಲಭ್ಯವಿರುವ ದತ್ತಾಂಶವನ್ನು ಕ್ರೋಢೀಕರಿಸಲಾಯಿತು. ಈ ಅನುಭವಜನ್ಯ ಪರಿಶೀಲನೆಯಿಂದ ಕಲ್ಪನಾತ್ಮಕ(conceptual) ಸಾಹಿತ್ಯದಲ್ಲಿ ಮತ್ತು ಸಂಸ್ಥೆಗಳ ಪದಗಳ ಬಳಕೆ ಮತ್ತು ಅರ್ಥೈಸುವಿಕೆಯಲ್ಲಿ ಗಂಭೀರ ವ್ಯಾಖ್ಯಾನಾತ್ಮಕ ವಿಸಂಗತಿಗಳು ಬೆಳಕಿಗೆ ಬಂದವು.

ಮೊದಲು ಈ ಅಧ್ಯಾಯವು ವ್ಯಾಖ್ಯಾನಾತ್ಮಕ ಪ್ರಯತ್ನಗಳ ಮೇಲೆ ಸಂಕರತೆಯ (hybridity) ಪರಿಣಾಮಗಳನ್ನು ಪರಿಗಣಿಸುತ್ತದೆ. ನಂತರ, ಬಳಸಲಾದ ವಿಧಾನಗಳ ಕುರಿತು ಚರ್ಚಿಸುತ್ತದೆ. ಅಧ್ಯಾಯದ ಅಧಿಕಾಂಶ ಭಾಗವು ಎರಡು ವಿಷಯಗಳ ಮೇಲೆ ಕೇಂದ್ರೀಕೃತವಾಗಿದೆ. (1) ಕಲ್ಪನಾತ್ಮಕ ಕಾರ್ಯದಲ್ಲಿ ಕಾಣಿಸಿಕೊಂಡ ಪರೋಪಕಾರಿ ಹಾಗೂ ಸಂಕರಿತಗೊಂಡ ಕಾರ್ಯಭಾಗಿಗಳ ಪೂರ್ವನಿರ್ಧರಿತ ವ್ಯಾಖ್ಯಾನಗಳು ಮತ್ತು (2) ಸಂಸ್ಥೆಗಳ ಸ್ವರೂಪದ ಕುರಿತು ತಾರ್ಕಿಕವಾಗಿ ರೂಪಿತವಾದ ಕಾರ್ಯಾತ್ಮಕ ವರ್ಗೀಕರಣ. ಎರಡನೆಯದನ್ನು ನಾವು ದತ್ತ ಸಂಚಯದಲ್ಲಿನ ಸಂಸ್ಥೆಗಳ ಗುಣಲಕ್ಷಣಗಳನ್ನು ತೆಗೆದುಕೊಳ್ಳುವ ಮೂಲಕ, ಅವುಗಳನ್ನು ಕ್ರಮಿಕವಾಗಿ ಪೂರ್ವ-ನಿರ್ಧರಿತ ವ್ಯಾಖ್ಯಾನಗಳೊಂದಿಗೆ ಹೊಂದಿಸಿ ರೂಪಿಸಿದ್ದೇವೆ. ಸಾಂಸ್ಥಿಕ ರೂಪಗಳನ್ನು ವರ್ಗೀಕರಿಸುವ ಸಂದರ್ಭದಲ್ಲಿ ಸಂಕರತೆಯ (hybridity) ಬೇಡಿಕೆಗಳಿಗೆ ಪ್ರತಿಕ್ರಿಯಿಸುವಾಗ ವಿವೇಚನಾತ್ಮಕ ಗುಣಲಕ್ಷಣಗಳ ವಿವರಣೆಯು ಹೆಚ್ಚು ಸಮರ್ಪಕವೆಂದು ನಾವು ಪ್ರತಿಪಾದಿಸುತ್ತೇವೆ.

ಸಂಕರತೆಯ (hybridity) ಸಂದರ್ಭದಲ್ಲಿ ಸಂಘಟನಾತ್ಮಕ ವಿಶೇಷತೆಯ ತರ್ಕದ ಪ್ರಸ್ತುತಿ

ದತ್ತಾಂಶದಲ್ಲಿರುವ ಅಂತರಗಳನ್ನು ಗಮನಿಸಿದರೆ ವರ್ಗೀಕರಣದ ವಿಕಸನವನ್ನು ಪ್ರಾಯೋಗಿಕ ವಿಶ್ಲೇಷಣೆಯೊಂದಿಗೆ ಹೋಲಿಸಿದಾಗ, ಅದು ಅಷ್ಟೇನು ತುರ್ತಿನದಲ್ಲವೆಂದು ತೋರುತ್ತದೆ.

---

[1] ವಿಶ್ವ ಬ್ಯಾಂಕಿನ ಪ್ರಾದೇಶಿಕ ಮತ್ತು ದೇಶೀಯ ವರ್ಗೀಕರಣಗಳನ್ನು ಉಪಯೋಗಿಸಿ ಕಾರ್ಯಾನ್ವಿತಗೊಳಿಸಲಾಗಿದೆ.

[2] . ಸಂಸ್ಥೆಗಳನ್ನು ಈ ಕೆಳಗೆ ಸೂಚಿಸಲಾದ ಮೂಲಗಳಿಂದ ಆರಿಸಲಾಗಿದೆ: Asian Venture Philanthropy Network member ship database, Center for Education Innovations programs database (ಉಪಕ್ರಮಗಳನ್ನು ವಿತ್ತಪೋಷಕರೊಂದಿಗೆ ಗುರುತಿಸುವುದು), Forbes Asia's 2017 Heroes of Philanthropy List (ವ್ಯಕ್ತಿಗಳನ್ನು ವಿತ್ತಪೋಷಕ ಸಂಘಟನೆಗಳೊಂದಿಗೆ ಗುರುತಿಸುವುದು), Global Impact Investing Network members list and The Asia Foundation donor list.

ಉದಾಹರಣೆಗೆ, ಈ ಯೋಜನೆಗೆ ಮಾಹಿತಿಯನ್ನು ಒದಗಿಸಿದ ಸಾಹಿತ್ಯವನ್ನು ಪರಿಶೀಲಿಸಿದಾಗ ಈ ಮುಂದಿನವುಗಳಲ್ಲಿ ಗಮನಾರ್ಹ ಕೊರತೆಗಳು ಕಂಡುಬಂದಿವೆ. ಅವುಗಳೆಂದರೆ, (1) ಚಟುವಟಿಕೆಗಳ ವ್ಯಾಪ್ತಿ, ಕಾರ್ಯಭಾಗಿಗಳ ಶ್ರೇಣಿ, ಮತ್ತು ಅವುಗಳ ಪರಸ್ಪರ ಸಂಬಂಧಗಳು, ಹೂಡಿಕೆಯ ಪ್ರಮಾಣ ಮತ್ತು ಪ್ರಕಾರಗಳು, ಹಾಗೂ ತೊಡಗುವಿಕೆಯ ಉಪ-ಕ್ಷೇತ್ರಗಳು (ಡ್ಯಾಗರ್ಸ್ ಮತ್ತು ನಿಕೋಲ್ಸ್, 2016; ಮಾರ್ಟಿನ್ ಮತ್ತು ವಿಟ್ಟೆ, 2008; ಸ್ಕೋಲೆರಿಚ್, 2012; ECOSOC, 2012; ವ್ಯಾನ್ ಫ್ಲೀಟ್, 2012); (2) ಪ್ರಾದೇಶಿಕ ಹಾಗೂ ದೇಶೀಯ ಮಟ್ಟದಲ್ಲಿ ಕಾರ್ಯನಿರ್ವಹಿಸುವ ದಕ್ಷಿಣದಲ್ಲಿರುವ ಕಾರ್ಯಭಾಗಿಗಳ ಕೊಡುಗೆ (ECOCOC, 2012; ಶಿಕ್ಷಣದ ಹಕ್ಕು ಯೋಜನೆ, 2015; Srivastava ಮತ್ತು Oh, 2010); (3) ಜಾಗತಿಕವಾಗಿ ದಕ್ಷಿಣದಲ್ಲಿರುವ ಪ್ರದೇಶಗಳ ಆಳವಾದ ವಿಶ್ಲೇಷಣೆ (ಶ್ರೀ ವಾಸ್ತವ ಮತ್ತು Oh, (2010); (4) ಕ್ರಮಬದ್ಧವಾಗಿ ವರದಿ ಮಾಡಿದ ಮತ್ತು ಸಹಭಾಜಿತಗೊಂಡ(share) ದತ್ತಾಂಶ; (5) ಹಾಗೂ ಖಾಸಗಿ ವಲಯದಲ್ಲಿ ಶಿಕ್ಷಣ ಕ್ಷೇತ್ರದ ಪಾಲ್ಗೊಳ್ಳುವಿಕೆಯ ಪ್ರಗತಿಯನ್ನು ಅನುಸರಿಸಲು ಮತ್ತು ಮೌಲ್ಯಮಾಪನ ಮಾಡಲು ಅಗತ್ಯವಾದ ಸಮಗ್ರ ದತ್ತಾಂಶ ಸಂಗ್ರಹಣೆ ಮತ್ತು ಸಾಧನಗಳು (ಮೌಮ್ನೆ ಮತ್ತು ಸಾಡೆಮೌಂಟ್, (2015), ದತ್ತಾಂಶ ಸಂಗ್ರಹಣೆ ಮತ್ತು ವಿಶ್ಲೇಷಣೆಯ ನಿಟ್ಟಿನ ಸಹಭಾಜಿತ ವೇದಿಕೆಗಳೂ (ECOSOC, 2012) ಸೇರಿದಂತೆ.

ಸಾಹಿತ್ಯದ ವಿಭಿನ್ನ ಸ್ವರೂಪ ಮತ್ತು ಮಾಹಿತಿಯ ಕೊರತೆಯು ಅದರಲ್ಲೂ ವಿಶೇಷವಾಗಿ ಸಂಕರಿತಗೊಂಡ ಕಾರ್ಯಭಾರಿಗಳು ಹಾಗೂ ತೊಡಗಿಸಿಕೊಳ್ಳುವ ಸ್ವರೂಪವು ಕೆಲವು ಸಂಶೋಧಕರು ಪ್ರಾಯೋಗಿಕ ಪ್ರಶ್ನೆಗಳ ಮೇಲೆ ಹೆಚ್ಚು ಕೇಂದ್ರೀಕೃತಗೊಂಡರೆ ಫಲಪ್ರದ ಪರಿಣಾಮ ಸಿಗಬಹುದೆಂದು ನಿಷ್ಕರ್ಷಿಸುವಂತೆ ಮಾಡಿದೆ (Dacin, Dacin & Matear, 2010). ಆದರೆ ಪದಗಳ ನಿರ್ದಿಷ್ಟೀಕರಣದಲ್ಲಿರುವ ಕೊರತೆಗಳು ಪ್ರಾಯೋಗಿಕ ವಿಶ್ಲೇಷಣೆಯನ್ನು ಅಸ್ಪಷ್ಟಗೊಳಿಸುತ್ತವೆ. ಕಾರ್ಯನಿರ್ವಹಣಾ ಮಟ್ಟದಲ್ಲಿ, ಸಾಂಸ್ಥಿಕ ಸ್ವರೂಪಗಳ ಕುರಿತ ಸ್ವೀಕೃತ ಶಬ್ದಾವಳಿಗಳ ಕೊರತೆಯಿಂದ ಹಾಗೂ ಹೂಡಿಕೆ ತಂತ್ರಗಳು ಮತ್ತು ಲಾಭದ ಸ್ಥಿತಿಗಳ ಕುರಿತು ಇರುವಂತಹ ತಪ್ಪುಗಳಿಂದಾಗಿ ತೊಡಕುಗಳು ಉದ್ಭವಿಸುತ್ತದೆ. ನಿರ್ದಿಷ್ಟೀಕರಣವಿಲ್ಲದೆ ಉದಾಹರಣೆಗೆ, ಯಾವ ಬಗೆಯ ಸಂಸ್ಥೆಗಳು ಒಟ್ಟಾರೆಯಾಗಿ (ಅಥವಾ ಹೋಲಿಕೆಯ ಆಧಾರದ ಮೇಲೆ) ಶಿಕ್ಷಣದ ಉಪಕ್ರಮಗಳಿಗೆ ಹಣಕಾಸು ಒದಗಿಸುತ್ತವೆ, ಯಾವಾಗ ಮತ್ತು ಎಷ್ಟು ಪ್ರಮಾಣದಲ್ಲಿ ಒದಗಿಸುತ್ತವೆ ಎಂಬುವುದರ ಕುರಿತು ದತ್ತಾಂಶವನ್ನು ಸಂಕಲಿತಗೊಳಿಸಲು ಸಾಧ್ಯವಿಲ್ಲ. ಪ್ರಾದೇಶಿಕ ಅಥವಾ ತುಲನಾತ್ಮಕ ಸಂಶೋಧನೆಯಲ್ಲಿ ಈ ಸಮಸ್ಯೆಯು ಮತ್ತಷ್ಟು ಗಂಭೀರವಾಗುತ್ತದೆ. ಏಕೆಂದರೆ ರಾಜ್ಯೇತರ ಕಾರ್ಯಭಾಗಿಗಳ ನಿಯಂತ್ರಕ ರೂಪರೇಷೆಗಳು ದೇಶದಿಂದ ದೇಶಕ್ಕೆ ಬದಲಾಗಿರುತ್ತವೆ. ಒಂದು ಸಂದರ್ಭದಲ್ಲಿ ನಿರ್ದಿಷ್ಟ ಸಾಂಸ್ಥಿಕ ಸ್ವರೂಪವೆಂದು ಪರಿಗಣಿಸಲ್ಪಡುವುದು ಇನ್ನೊಂದು ಸಂದರ್ಭದಲ್ಲಿ ಹಾಗಾಗದೇ ಇರಬಹುದು.

ಇದರ ಜೊತೆಯಲ್ಲೇ, ಜಟಿಲ ಸಾಂಸ್ಥಿಕ ಪ್ರಕ್ರಿಯೆಗಳು, ಸಹಭಾಗಿತ್ವಗಳು ಮತ್ತು ಸಂಪರ್ಕ ಜಾಲಗಳ ಕುರಿತು ವಿಶ್ಲೇಷಣೆಗಳು ಕಂಡುಬರುತ್ತಿವೆ. ಇವುಗಳ ಮೂಲಕ ವಿವಿಧ ಪರೋಪಕಾರಿ ಹಾಗೂ ಇತರ ರಾಜ್ಯೇತರ ಖಾಸಗಿ ಸಂಸ್ಥೆಗಳು ಜಾಗತಿಕ ಮಟ್ಟದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ತೊಡಗಿಸಿಕೊಂಡಿವೆ, ಅವರಲ್ಲಿ ಕೆಲವರಿಗೆ ಸ್ಪರ್ಧಾತ್ಮಕ ಪ್ರೇರಣೆಗಳು ಮತ್ತು ಆಸಕ್ತಿಗಳಿವೆ (ಬಾಲ್ ಮತ್ತು ಒಲ್ಮೆಡೋ, 2011; ಮೆನಾಶಿ, 2016; ಶ್ರೀವಾಸ್ತವ ಮತ್ತು ಬೌರ್, 2016; ವರ್ಜರ್, 2012). ಇವು ಸಾಮರ್ಥ್ಯಾತ್ಮಕ ಪ್ರಭಾವ ಹಾಗೂ ಸಾಮಾಜಿಕ ಮತ್ತು ಸಂಯುಕ್ತ ಮೌಲ್ಯ ಹೂಡಿಕೆ ತಂತ್ರಗಳ ಮೇಲಿನ ವರ್ಧಿತ ಗಮನದ ಜೊತೆಗೆ ಸಾಗುತ್ತಿವೆ (ಅಂದರೆ, ಆರ್ಥಿಕ ಮತ್ತು ಸಾಮಾಜಿಕ ಲಾಭವನ್ನು ಹುಡುಕುವುದು) ಡಿ. ಕ್ಯಾಪಿಟಲ್ ಪಾರ್ಟ್‌ನರ್ಸ್, 2013; ಸ್ಟೀರ್ ಮತ್ತು ಇತರರು, 2015). ಇವುಗಳಲ್ಲಿ, ಪ್ರಭಾವಿ (ಪರಿಣಾಮಕಾರಿ) ಹೂಡಿಕೆಯು ಮುಂಚೂಣಿಯಲ್ಲಿದೆಯೆಂಬುದು ವಾದಯೋಗ್ಯವಾದುದು. ಪ್ರಭಾವಿ ಹೂಡಿಕೆಯನ್ನು ಗ್ಲೋಬಲ್ ಇಂಪ್ಯಾಕ್ಟ್ ಇನ್ವೆಸ್ಟಿಂಗ್ ನೆಟ್ವರ್ಕ್ (GIIN) ಹೀಗೆ ವ್ಯಾಖ್ಯಾನಿಸಿದೆ: ಆರ್ಥಿಕ ಲಾಭದ ಜೊತೆಗೆ ಸಾಮಾಜಿಕ ಮತ್ತು ಪರಿಸರ ಸಂಬಂಧಿತ ಪ್ರಭಾವವನ್ನುಂಟು ಮಾಡುವ ಉದ್ದೇಶದಿಂದ ಸಂಸ್ಥೆಗಳು, ಸಂಘಟನೆಗಳು ಮತ್ತು ನಿಧಿಗಳಲ್ಲಿ ಮಾಡುವ ಹೂಡಿಕೆಗಳು. ಪ್ರಭಾವಿ ಹೂಡಿಕೆಗಳನ್ನು ಉದಯೋನ್ಮುಖ ಮತ್ತು ವಿಕಸಿತ ಮಾರುಕಟ್ಟೆಗಳೆರಡರಲ್ಲೂ ಮಾಡಬಹುದು. ಹೂಡಿಕೆದಾರರ ಕಾರ್ಯತಂತ್ರಗಳ ಗುರಿಗಳ ಮೇಲೆ ಅವಲಂಬಿತವಾಗಿ, ಇವು ಮಾರುಕಟ್ಟೆ ದರಕ್ಕಿಂತ ಕಡಿಮೆ ಆದಾಯದಿಂದ ಹಿಡಿದು ಮಾರುಕಟ್ಟೆ ದರದವರೆಗಿನ ವಿಭಿನ್ನ ಪ್ರಕಾರದ ಲಾಭಾಂಶಗಳನ್ನು ಗುರಿಯಾಗಿರಿಸಿಕೊಳ್ಳಬಹುದು (ಗ್ಲೋಬಲ್ ಇಂಪ್ಯಾಕ್ಟ್ ಇನ್ವೆಸ್ಟಿಂಗ್ ನೆಟ್ವರ್ಕ್ ಜಿ.ಐ.ಐ.ಎನ್, (ದಿನಾಂಕವಿಲ್ಲ).

ಪ್ರಭಾವೀ ಹೂಡಿಕೆಗಳನ್ನು ಬಹುಮಟ್ಟಿಗೆ ಹೊಸ ಸಂಕರಿತ ಸಂಸ್ಥೆಗಳೊಂದಿಗೆ ಸಂಯೋಜಿಸಲಾಗುತ್ತದೆ. ಆದರೆ ವಾಸ್ತವವಾಗಿ ಇದು ಧನ ಸಹಾಯದ ಒಂದು ವಿಧಾನದ ನಿಟ್ಟಿನಲ್ಲಿ, ನಿರ್ದಿಷ್ಟ ಸಾಂಸ್ಥಿಕ ರೂಪಗಳಿಗೆ ಸೀಮಿತವಾಗಿಲ್ಲ. ಈ ಯೋಜನೆಯಿಂದ ಲಭಿಸಿರುವ ಉದಯೋನ್ಮುಖ ದತ್ತಾಂಶವು ಪರೋಪಕಾರಿ ಸಂಸ್ಥೆಗಳು ಪ್ರಭಾವಿ ಹೂಡಿಕೆಯನ್ನು ತಮ್ಮ ಬಂಡವಾಳದ ಪಟ್ಟಿಗಳ ಭಾಗವಾಗಿ ಬಳಸಬಹುದೆಂಬುದನ್ನು ತೋರಿಸುತ್ತದೆ. ಒಂದು ಉದಾಹರಣೆಯೆಂದರೆ, ಮೈಕೆಲ್ ಮತ್ತು ಸೂಸನ್ ಡೆಲ್ ಪ್ರತಿಷ್ಠಾನ(MSDF)ದಿಂದ ಭಾರತದಲ್ಲಿ ಪ್ರಭಾವಿ ಹೂಡಿಕೆಯ ಉಪಯೋಗ. ಈ ಲೇಖನವನ್ನು ಬರೆಯುವ ಸಮಯದಲ್ಲಿ, MSDF, ಮತ್ತು ಸಾಲಗಳ ಮೂಲಕ ಭಾರತದಲ್ಲಿ 27 ಉಪಕ್ರಮಗಳಲ್ಲಿ ಪ್ರಭಾವೀ ಹೂಡಿಕೆಗಳನ್ನು ಮಾಡಿದೆ. ಅವುಗಳಲ್ಲಿ ಕೆಲವು ಶಿಕ್ಷಣ ಕ್ಷೇತ್ರದಲ್ಲಿವೆ. ಬೆಂಬಲಿತ ಉಪಕ್ರಮಗಳ ವ್ಯಾಪ್ತಿ ವಿಶಾಲವಾಗಿದ್ದು, ಅವು ಕಡಿಮೆ ಶುಲ್ಕದ ಖಾಸಗಿ ಶಾಲೆಗಳ ಮೌಲ್ಯಮಾಪನ ವ್ಯವಸ್ಥೆಗಳು, ಪರೀಕ್ಷಾ ತರಬೇತಿ ಕೇಂದ್ರಗಳು

ಮತ್ತು ಮೊಬೈಲ್ ಶಿಕ್ಷಣ ತಂತ್ರಜ್ಞಾನ ಅನ್ವಯಿಕಗಳನ್ನು ಒಳಗೊಂಡಿದ್ದರೂ, ಕೇವಲ ಅಷ್ಟಕ್ಕೇ ಮಾತ್ರ ಸೀಮಿತವಾಗಿರಲಿಲ್ಲ.[3]

ಇದರ ಜೊತೆಗೆ ಇವುಗಳ ಮತ್ತು ಪರಿಣಾಮ ಉನ್ಮುಖ ಅಥವಾ ಸಾಮಾಜಿಕ ಉದ್ಯಮಶೀಲತೆ/ನವೀನತೆ ಎಂದು ವ್ಯಾಪಕವಾಗಿ ತಿಳಿಯಲ್ಪಟ್ಟಿರುವ ಇತರೆ ಕಾರ್ಯತಂತ್ರಗಳ ಉಪಯೋಗವು, ರಾಜ್ಯೇತರ ಖಾಸಗಿ ಸಂಸ್ಥೆಗಳಿಗೆ ಸೀಮಿತವಾಗಿರಲಿಲ್ಲ. ಉದಾಹರಣೆಗೆ, ಜಿಂಗ್ ಮತ್ತು ಗಾಂಗ್ (2012) ಶಾಂಘೈ ನಗರ ನಿಗಮದ ನಾಗರಿಕ ವ್ಯವಹಾರಗಳ ಇಲಾಖೆಯ ವಾರ್ಷಿಕ ಉದ್ಯಮ ಪರೋಪಕಾರಿ ಕಾರ್ಯಕ್ರಮದ ವಿವರಗಳನ್ನು ಸವಿಸ್ತಾರವಾಗಿ ಮಂಡಿಸುತ್ತಾರೆ. ಸರ್ಕಾರಿ ನೇತೃತ್ವದ ಈ ಯೋಜನೆಯು, ಇತರೆ ಲಕ್ಷಿತ(target) ಸಮೂಹಗಳೊಂದಿಗೆ, ಮಕ್ಕಳ ಮತ್ತು ಯುವಕರ ಸೇವಾ ಸಂಸ್ಥೆಗಳಿಗೆ ಬೆಂಬಲವನ್ನು ಒದಗಿಸುತ್ತದೆ. ಸಿ.ಡಿ.ಸಿ(CDC), ಅಂದರೆ ಯುನೈಟೆಡ್ ಕಿಂಗ್ಡಮ್‌ನ ಅಭಿವೃದ್ಧಿ ಹಣಕಾಸು ಸಂಸ್ಥೆ. ಇದು ಸಂಪೂರ್ಣವಾಗಿ ಯುನೈಟೆಡ್ ಕಿಂಗ್ಡಮ್‌ನ ಅಂತರಾಷ್ಟ್ರೀಯ ಅಭಿವೃದ್ಧಿ ಇಲಾಖೆಯ DFID) ಸ್ವಾಮ್ಯದಲ್ಲಿದ್ದು, ಪರಿಣಾಮಕಾರಿ ನಿಧಿಯನ್ನು ಸ್ಥಾಪಿಸಿದೆ. ಬಡವರನ್ನು ಗ್ರಾಹಕರು, ಪೂರೈಕೆದಾರರು, ಅಥವಾ ನೌಕರರು ಎಂಬಂತೆ ಭಾವಿಸಿ ಸೇವೆ ಸಲ್ಲಿಸುವ ಉದ್ಯಮಗಳಲ್ಲಿ ಹೂಡಿಕೆ ಮಾಡುವ ಪರಿಣಾಮಕಾರಿ ಹೂಡಿಕೆ ನಿಧಿಗಳಲ್ಲಿ ಇದು, DFIDಯ ದೀರ್ಘಕಾಲಿಕ "ಸಮಂಜಸ" ಬಂಡವಾಳವನ್ನು ಹೂಡುತ್ತದೆ (ಇಂಪ್ಯಾಕ್ಟ್ ಪ್ರೋಗ್ರಾಂ, 2018). ಇದು ಉಪ-ಸಹಾರ ಆಫ್ರಿಕಾ ಮತ್ತು ದಕ್ಷಿಣ ಏಷ್ಯಾಕ್ಕೆ ಸೇರಿದ ಕಡಿಮೆ ಆದಾಯ ಹಾಗೂ ಕೆಳಮಧ್ಯಮ ವರ್ಗದ ಆದಾಯ ಹೊಂದಿರುವ ದೇಶಗಳನ್ನು ಗುರಿಯಾಗಿಸಿಕೊಂಡಿದ್ದು ಶಿಕ್ಷಣ ಸೇರಿದಂತೆ ಹಲವು ಕ್ಷೇತ್ರಗಳಲ್ಲಿನ ಹೂಡಿಕೆಯನ್ನು ಒಳಗೊಂಡಿದೆ.

ಈ ಉದಾಹರಣೆಗಳು ಸಂಕರತೆಯ ಕೇಂದ್ರೀಯ ಆಧಾರವನ್ನು, ಅಥವಾ 'ಸಂಕರಿತ ಸಂಘಟನೆ'ಯನ್ನು ನಿಖರವಾಗಿ ಪ್ರತಿಬಿಂಬಿಸುತ್ತವೆ (ಬಟ್ಟಿಲಾನಾ ಮತ್ತು ಲೀ 2014). ಅವರ ವ್ಯಾಖ್ಯಾನವು ಇದನ್ನು ಹೀಗೆ ವ್ಯಾಖ್ಯಾನಿಸುತ್ತದೆ: 'ಸಂಸ್ಥೆಗಳು ಹಲವು ಸಾಂಸ್ಥಿಕ ಸ್ವರೂಪಗಳ ಅಂಶಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಸಂಯೋಜಿಸಲು ಬಳಸುವ ಚಟುವಟಿಕೆಗಳು, ಚೌಕಟ್ಟುಗಳು, ಪ್ರಕ್ರಿಯೆಗಳು ಮತ್ತು ಅರ್ಥಗಳು. ಇವುಗಳಲ್ಲಿ, ಅವರು ಸಂಕರತೆಯನ್ನು ಈ ಮುಂದಿನವುಗಳ ಸಂಯೋಜನೆಯ ರೂಪದಲ್ಲಿ ಪರಿಗಣಿಸಲು ಸೂಚಿಸುತ್ತಾರೆ. (1) ವಿವಿಧ ಸಾಂಸ್ಥಿಕ ಗುರುತುಗಳು; (2) ವಿವಿಧ ಸಾಂಸ್ಥಿಕ ಸ್ವರೂಪಗಳು; ಮತ್ತು (3) ವಿವಿಧ ಸಾಂಸ್ಥಿಕ ತಾರ್ಕಿಕ ಅಂಶಗಳು (ಬಟ್ಟಿಲಾನಾ ಮತ್ತು ಲೀ, 2014). ಬಹುಮುಖತೆಯು ಸಂಕರತೆಯಲ್ಲಿ ಅಂತರ್ನಿಹಿತವಾಗಿರುವುದರಿಂದ, ಸಂಕರತೆಯ ವಿಶೇಷ ಅಂಶಗಳನ್ನು ಸ್ಪಷ್ಟಗೊಳಿಸುವುದು ಅಗತ್ಯ.

[3] MSDF, ಸಂಯುಕ್ತ ಸಂಸ್ಥಾನದಲ್ಲಿಯೂ ಸಹ ಪ್ರಭಾವಿ ಹೂಡಿಕೆಗಳನ್ನು ಮಾಡಿತು. ನಮ್ಮ ಅಧ್ಯಯನವು ಏಷಿಯಾವನ್ನು ಕೇಂದ್ರೀಕರಿಸಿದ್ದ ಕಾರಣ, ಇವನ್ನು ಇಲ್ಲಿ ಚರ್ಚಿಸಿರುವುದಿಲ್ಲ. ಮೈಕೆಲ್ ಮತ್ತು ಸೂಸನ್ ಡೆಲ್ ಫೌಂಡೇಷನಿಂದ ಪಡೆದ ದತ್ತಾಂಶ (ದಿನಾಂಕವಿಲ್ಲ). 2018ರ ಡಿಸೆಂಬರ್ 10ಕ್ಕೆ ಕರಾರುವಾಕ್ಕಾಗಿದೆ.

ಇಲ್ಲದಿದ್ದರೆ, ಸಂಸ್ಥೆಗಳು ಹೇಗೆ ಕಾರ್ಯ ನಿರ್ವಹಿಸುತ್ತವೆ ಮತ್ತು ಅವುಗಳ ಅಂತರ್ನಿಹಿತ ಕಾರ್ಯತಂತ್ರಗಳು ಯಾವುವು ಎಂಬುದನ್ನು ಗ್ರಹಿಸುವುದು ಕಷ್ಟವಾಗುತ್ತದೆ. ಇದನ್ನು ಸಾಧಿಸಲು, ಸಂದರ್ಭಾನುಸಾರ ಹೊಂದಿಕೊಳ್ಳುವ ದೃಷ್ಟಿಕೋನವು ಅವಶ್ಯಕ.

ಮೇಲೆ ಪ್ರಮುಖವಾಗಿ ಬಿಂಬಿಸಿದ ಮೂರು ಆಯಾಮಗಳಲ್ಲಿ, ಸಂಸ್ಥೆಯ ರೂಪಗಳನ್ನು ನಿರ್ಧರಿಸುವ ಉದ್ದೇಶದಿಂದ ಸಂಘಟನಾತ್ಮಕ ಗುರುತುಗಳನ್ನು ವ್ಯಾಖ್ಯಾನಿಸುವುದರ ಮೇಲೆ ನಮ್ಮ ವಿಶ್ಲೇಷಣೆಯು ಕೇಂದ್ರೀಕೃತವಾಗಿದೆ. ಮಾಹಿತಿ ಸಂಗ್ರಹಣೆಗಾಗಿ ಪ್ರಾಯೋಗಿಕ ದತ್ತಾಂಶ ಸಂಗ್ರಹಣೆಯ ನಿಟ್ಟಿನ ಕಾರ್ಯಾತ್ಮಕ ಒಪ್ಪಂದಕ್ಕೆ ಬರಲು ನಾವು ಉದ್ದೇಶಿಸಿದೆವು. ನಮ್ಮ ವಿಧಾನವು ಮೊದಲು ಸೂಕ್ತವಾದ ಪದಗಳನ್ನು ಕಂಡುಹಿಡಿಯಲು ಸಾಹಿತ್ಯದ ಸಮೀಕ್ಷೆಯನ್ನು ಅವಲಂಬಿಸಿತು; ನಂತರ ಅವುಗಳನ್ನು ದೊಡ್ಡ ದತ್ತ ಸಂಚಯದದಿಂದ ಆಯ್ದ ಸಂಸ್ಥೆಗಳ ಉಪ- ನಮೂನೆಗಳ ಮೇಲೆ ಪರೀಕ್ಷಿಸಿದೆವು. ಆದರೆ ಸಂಕರದ ಸ್ವಭಾವ, ಸಂಸ್ಥೆಗಳ ಪ್ರಕ್ರಿಯೆ ಹಾಗೂ ರಚನೆಯಗಳಲ್ಲಿನ ಕ್ಲಿಷ್ಟತೆ; ಸಂಸ್ಥೆಯ ದತ್ತಾಂಶದಲ್ಲಿನ ಅಸ್ಪಷ್ಟತೆ; ಪದಗಳ ಮಿಶ್ರಣ ಮತ್ತು ವಿಭಿನ್ನ ಸಾಹಿತ್ಯಗಳು, ಕೆಲವು ಸಮಸ್ಯೆಗಳನ್ನು ಉಂಟು ಮಾಡಿದವು. ನಂತರ, ಕಾರ್ಯಾತ್ಮಕ ವ್ಯಾಖ್ಯಾನಗಳನ್ನು ಪರಿಷ್ಕೃತಗೊಳಿಸಿ, ವಿಶ್ಲೇಷಣೆಗೆ ಒಂದು ಕಾರ್ಯೋನ್ಮುಖ ವರ್ಗೀಕರಣವನ್ನು ರೂಪಿಸಲು ನಾವು ಪೂರ್ವ ನಿರ್ಧಾರಿತ ವ್ಯಾಖ್ಯಾನಗಳನ್ನು ವಿವೇಚನಾತ್ಮಕ ರೂಪದಲ್ಲಿ ಸಂಸ್ಥೆಗಳು ತಾವು ವರದಿ ಮಾಡಿದ ಲಕ್ಷಣಗಳಿಗೆ ಅನ್ವಯಿಸಿದೆವು.

ವಿಧಾನಗಳು:

ಪರಿಕಲ್ಪನೆಯನ್ನು ರೂಪಿಸಿಕೊಳ್ಳುವ ಮೊದಲನೆಯ ಹಂತವು ಎರಡು ಸಾಹಿತ್ಯಗಳ ಸಮೀಕ್ಷೆಯನ್ನು ಸಂಯೋಜನೆಗೊಳಿಸುವುದನ್ನು ಒಳಗೊಂಡಿತ್ತು. ಪ್ರತ್ಯೇಕ ಅಧ್ಯಯನದ ನಿಟ್ಟಿನಲ್ಲಿ, ಮೊದಲನೆಯ ವ್ಯಾಪಕ ಸಮೀಕ್ಷೆಯು ಜಾಗತಿಕ ದಕ್ಷಿಣ ವಲಯದ ಶಿಕ್ಷಣ ಕ್ಷೇತ್ರದಲ್ಲಿ ಖಾಸಗಿ ವಲಯದ ತೊಡಗುವಿಕೆಯ ಕುರಿತಾಗಿತ್ತು. ವ್ಯಾಪ್ತಿಯಲ್ಲಿ ದೊಡ್ಡದಾಗಿದ್ದರೂ, ಆ ಸಮೀಕ್ಷೆಯು ಎರಡನೆಯ ಕೇಂದ್ರಿತ ಸಮೀಕ್ಷೆಗೆ ದಿಕ್ಕು ನೀಡುವಲ್ಲಿ ನಿರ್ಣಾಯಕ ಪಾತ್ರ ವಹಿಸಿತು ಮತ್ತು ವಿಸ್ತೃತ ವರ್ಗೀಕರಣಗಳು ಹಾಗೂ ವಿಭಿನ್ನ ಕಾರ್ಯನಿರ್ವಾಹಕರ ವ್ಯಾಪ್ತಿಗೆ ಆಧಾರವಾಯಿತು. ಎರಡನೇ ಸಮೀಕ್ಷೆಯು ಈ ಅಧ್ಯಯನಕ್ಕೆ ಸಂಬಂಧಿಸಿದ ಪರೋಪಕಾರಿ ಹಾಗೂ ಇತರ ಕಾರ್ಯನಿರ್ವಾಹಕರ ನಿರ್ದಿಷ್ಟ ಸಾಂಸ್ಥಿಕ ರೂಪಗಳ ಕುರಿತು ಕೇಂದ್ರೀಕೃತವಾಗಿತ್ತು. ನಾವು ಎರಡೂ ಸಮೀಕ್ಷೆಗಳಿಂದ ಪಡೆದ ಪದಗಳನ್ನು ಮೊದಲಿಗೆ ಏಷ್ಯನ್ ವೆಂಚರ್ ಫಿಲಾಂತ್ರಪಿ ನೆಟ್ವರ್ಕ್(AVPN)ನಿಂದ ಪಡೆದ ಸಂಸ್ಥೆಗಳ ಉಪ-ನಮೂನೆಯ ಮೇಲೆ ಪರೀಕ್ಷಿಸಿದೆವು (AVPN ಒಂದು ಪ್ರಾದೇಶಿಕ ನೆಟ್‌ವರ್ಕ್ ಸೇವಾ ಸಂಸ್ಥೆಯಾಗಿದ್ದು, ದತ್ತ ಸಂಚಯನಕ್ಕಾಗಿ ಮಾದರಿ ಸಂಸ್ಥೆಗಳನ್ನು ಪಡೆದುಕೊಳ್ಳಲು ಅದನ್ನು ಬಳಸಲಾಗುತ್ತದೆ). ಪ್ರಾರಂಭದಲ್ಲೇ ಪೂರ್ವ ನಿರ್ಧರಿತ ವ್ಯಾಖ್ಯಾನಗಳು ಅಪರ್ಯಾಪ್ತವಾಗಿವೆ ಎಂಬುದು ಸ್ಪಷ್ಟವಾಯಿತು. ಇದು ವಿಶೇಷವಾಗಿ ಹೊಸ ಸಂಕರ ಸ್ವರೂಪಗಳ

ಕುರಿತು ದಿಟವಾಗಿತ್ತು. ಹೀಗೆ, ದತ್ತ ಸಂಚಯದಲ್ಲಿನ ಸಂಸ್ಥೆಗಳ ಸಂಪೂರ್ಣ ಮಾದರಿಯ ಮೇಲೆ ವಿವೇಚನಾತ್ಮಕ ವಿಧಾನವನ್ನು ಬಳಸಿಕೊಂಡು (ಉಪಯುಕ್ತ ಸಮೀಕ್ಷೆಗೆ ಥಾಮಸ್ [2006] ಅನ್ನು ನೋಡಿ) ನಾವು ಪೂರ್ವ ನಿರ್ಧರಿತ ವ್ಯಾಖ್ಯಾನಗಳನ್ನು ಪರಿಷ್ಕರಿಸಿದೆವು ("ಪೂರ್ವ ನಿರ್ಧರಿತ ವ್ಯಾಖ್ಯಾನಗಳು ಮತ್ತು ವಿವೇಚನಾತ್ಮಕ ವರ್ಗೀಕರಣದ ಪರೀಕ್ಷಣೆ" ಎಂಬ ಶೀರ್ಷಿಕೆಯ ವಿಭಾಗವನ್ನು ನೋಡಿ).

ಸಮೀಕ್ಷೆ 1: ಖಾಸಗಿ ವಲಯದ ಪಾಲ್ಗೊಳ್ಳುವಿಕೆ (ವಿಸ್ತೃತ ಸಮೀಕ್ಷೆ)

ಜಾಗತಿಕ ದಕ್ಷಿಣ ವಲಯದಲ್ಲಿನ ಖಾಸಗಿ ವಲಯದ ಪಾಲ್ಗೊಳ್ಳುವಿಕೆ ಹಾಗೂ ವಿವಿಧ ರಾಜ್ಯೇತರ ಕಾರ್ಯನಿರ್ವಾಹಕರಿಗೆ ಸಂಬಂಧಿಸಿದ 24 ಮುಖ್ಯ ಪದಗಳು/ಪರಿಭಾಷೆಗಳ ಸಂಯೋಜನೆಯ ಮೂಲಕ ಒಟ್ಟು 246 ವ್ಯಕ್ತಿಗತ ಶೋಧ - ಸೂತ್ರಗಳನ್ನು ಬಳಸಲಾಯಿತು. ಎಲ್ಲಕ್ಕಿಂತ ನವೀನತಮ ಸಾಹಿತ್ಯವನ್ನು ಸಂಗ್ರಹಿಸುವ ಸಲುವಾಗಿ ಕಾಲಮಿತಿಯನ್ನು (2005ರಿಂದ 2015ರವರೆಗೆ, ನಂತರ 2017ಕ್ಕೆ ಸಾಮಯಿಕ(update)ಗೊಳಿಸಲಾಯಿತು) ಸೇರಿಸಲಾಯಿತು. ವಿದ್ವತ್‌ಪೂರ್ಣ ಬರಹಗಳ ಜೊತೆಗೆ ಅಂತಾರಾಷ್ಟ್ರೀಯ ಸಂಸ್ಥೆಗಳು ಮತ್ತು ಖಾಸಗಿ ವಲಯದ ಸಂಸ್ಥೆಗಳಿಂದ ಲಭ್ಯವಾಗುವ ಕಾಗದಪತ್ರಗಳು, ವರದಿಗಳು ಮತ್ತು ಇತರ ಸಾಹಿತ್ಯದ ಸಂಗ್ರಹವನ್ನು ಗರಿಷ್ಠಗೊಳಿಸಲು ಗೂಗಲ್ ಸ್ಕಾಲರ್ ಅನ್ನು ಬಳಸಲಾಯಿತು. ಇಲ್ಲದಿದ್ದಲ್ಲಿ ಇವು ಈ ಕಾರ್ಯದಿಂದ ಹೊರಗುಳಿಯುವ ಸಾಧ್ಯತೆಯಿತ್ತು. ಫಲಿತಾಂಶಗಳ ಮೊದಲ 10 ಪುಟಗಳನ್ನು (ಅತಿ ಹೆಚ್ಚು ಫಲಿತಾಂಶಗಳಿಗೆ 15 ಪುಟಗಳು) ಪರಿಶೀಲಿಸಲಾಯಿತು. ಒಟ್ಟು 250 ಸಂಪನ್ಮೂಲಗಳನ್ನು ಸಂಗ್ರಹಿಸಿ, ಪರಿಶೀಲಿಸಿ, ಪರಿಗಣಿಸಲಾಯಿತು.

ಸಾರಾಂಶವನ್ನು ಓದಿ, ಮುಂದಿನ ಹಂತದ ಪರಿಶೀಲನೆಗೆ ಮುಖ್ಯ ದಸ್ತಾವೇಜಿನಲ್ಲಿ ಅದನ್ನು ಪ್ರತಿಮಾಡಲಾಯಿತು. ನಕಲು ಫಲಿತಾಂಶಗಳನ್ನು ತೆಗೆದುಹಾಕಲಾಯಿತು. ಈ ಹಂತದ ತಪಾಸಣಾ ಪ್ರಕ್ರಿಯೆಯು ಶ್ರೀವಾಸ್ತವ ಅವರ ಅಸ್ತಿತ್ವದಲ್ಲಿರುವ ಸಾಹಿತ್ಯದ ದತ್ತ ಸಂಚಯದಲ್ಲಿ ಈಗಾಗಲೇ ಇರುವ ವಿಷಯಗಳನ್ನು ತೆಗೆದುಹಾಕಿತು. ಉಳಿದ ಸಂಪನ್ಮೂಲಗಳನ್ನು ಪರಿಶೀಲಿಸಿ, ಆಸಕ್ತ ಕ್ಷೇತ್ರಗಳಿಗೆ ನೇರವಾಗಿ ಸಂಬಂಧಪಡದಿರುವುದನ್ನು ತೆಗೆದು ಹಾಕಲಾಯ್ತು. ಹೀಗೆ ಹೊರಹಾಕಲಾದ ಫಲಿತಾಂಶಗಳನ್ನು ಎರಡನೇ ಬಾರಿ ಹೆಚ್ಚಿನ ಮುತುವರ್ಜಿಯಿಂದ ಸಮೀಕ್ಷಿಸಲಾಯ್ತು. ನಂತರ ಅವುಗಳನ್ನು ಮೆಂಡ್ಲಿ(Mendeley) ಗ್ರಂಥಸೂಚಿ ಉಲ್ಲೇಖ ನಿರ್ವಾಹಕದಲ್ಲಿ ಸೇರಿಸಲಾಯಿತು. ವಿಷಯಕ್ಕೆ ಸಂಬಂಧಿಸಿದ ಪ್ರಮುಖ ಪದಗಳನ್ನು ನೀಡಿ, ಪ್ರತಿಯೊಂದು ಉಲ್ಲೇಖವನ್ನೂ ಓದಿ, ಟಿಪ್ಪಣಿಮಾಡಲಾಯಿತು.

ಸಮೀಕ್ಷೆ 2: ಪರೋಪಕಾರಿ ಮತ್ತು ಸಂಕರಿತ ಸಾಂಸ್ಥಿಕ ಸ್ವರೂಪಗಳು (ಕೇಂದ್ರಿತ ಸಮೀಕ್ಷೆ)

ಎರಡನೇ ಪರಿಶೀಲನೆಯು ಈ ಅಧ್ಯಯನದ ಉದ್ದೇಶವನ್ನು ಗಮನದಲ್ಲಿಟ್ಟುಕೊಂಡು (ಸಾಮಾಜಿಕ+) ಪರಿಣಾಮಕಾರಿ ಹೂಡಿಕೆ ಮತ್ತು ಉದ್ಯಮ+) ಪರೋಪಕಾರಿ, ಎಂಬ ಶೋಧ ಪದಗಳಿಗೆ ಸಂಬಂಧಿಸಿದ ಸಾಹಿತ್ಯದ ಮೇಲೆ ಕೇಂದ್ರೀಕೃತವಾಗಿತ್ತು. ಈ ಶೋಧನೆಯು ಒಂದನೇ ಪರಿಶೀಲನೆಗೆ ಪೂರಕವಾಗುವ ಸಾಂಸ್ಥಿಕ ಸ್ವರೂಪಗಳ ಮೊದಲೇ ಅಸ್ತಿತ್ವದಲ್ಲಿದ್ದ ವರ್ಗೀಕರಣಗಳು ಮತ್ತು ಕಾರ್ಯಗತಗೊಳಿಸಬಹುದಾದ ಪರಿಭಾಷೆಗಳನ್ನು ಗುರುತಿಸುವುದನ್ನು ಉದ್ದೇಶಿಸಿತ್ತು. ಮೇಲೆ ತಿಳಿಸಿರುವಂತೆ ಅದೇ ಪರಿಶೀಲನೆ ಮತ್ತು ಪರಿಶೀಲನಾ ಪ್ರಕ್ರಿಯೆಗಳನ್ನು ಅನುಸರಿಸಲಾಯಿತು. ಪ್ರಮುಖ ಶೈಕ್ಷಣಿಕ ದತ್ತ ಸಂಚಯವೆನಿಸಿರುವ ERIC(Education Resources Information Center)ನಲ್ಲಿ ಪ್ರಾಥಮಿಕ ಶೋಧನೆ ನಡೆಸಲಾಯಿತು. ಈ ಕ್ಷೇತ್ರದಲ್ಲಿ ಲಭ್ಯವಿರುವ ಶಿಕ್ಷಣ ಸಂಬಂಧಿತ ಸಾಹಿತ್ಯವು ಸೀಮಿತವಾಗಿರುವುದರಿಂದ, ಅಂತಾರಾಷ್ಟ್ರೀಯ ಅಭಿವೃದ್ಧಿ ಕ್ಷೇತ್ರಗಳಲ್ಲಿನ ಶೈಕ್ಷಣಿಕ ಸಾಹಿತ್ಯವನ್ನು ಒಳಗೊಳ್ಳಲು ಅನುವಾಗುವಂತೆ, ಶೋಧನೆಯ ಅವಧಿ ಹಾಗೂ ಶೈಕ್ಷಣಿಕ ಕ್ಷೇತ್ರಗಳನ್ನು ವಿಸ್ತರಿಸಿ, EBSCO, JSTOR ಮತ್ತು SCOPUSಗಳನ್ನು ಬಳಸಲಾಯಿತು (ಅವಧಿ 1997-2016).[4]

ಅಭಿವೃದ್ಧಿ ಮತ್ತು ಖಾಸಗಿ ವಲಯದ ಸಂಸ್ಥೆಗಳು ಈ ಕ್ಷೇತ್ರದ ಸಾಹಿತ್ಯಕ್ಕೆ ನೀಡಿರುವ ಸ್ವೀಕೃತ ಕೊಡುಗೆಯನ್ನು ಪರಿಗಣಿಸಿ, ಮತ್ತೊಂದು ಗುರಿಯ ನಿಟ್ಟಿನಲ್ಲಿ ಶೋಧನೆ ನಡೆಸಲಾಯಿತು. ಸಾಹಿತ್ಯದಲ್ಲಿ ಮತ್ತು ವಿಷಯಗಳನ್ನು ತಿಳಿಸುವ ವಿಶೇಷಜ್ಞರಿಂದ ಪರೋಪಕಾರಿ ಮತ್ತು ಪ್ರಭಾವಿ/ಪರಿಣಾಮಕಾರಿ ಹೂಡಿಕೆಯ ಅಗ್ರಗಣ್ಯರು ಅಥವಾ ಪ್ರಮುಖ ಪಾತ್ರ ನಿರ್ವಾಹಕರೆಂದು ಪರಿಗಣಿಸಲ್ಪಟ್ಟ18 ಪ್ರಮುಖ ಸಂಸ್ಥೆಗಳ ವೆಬ್‌ಸೈಟ್‌ಗಳಲ್ಲಿನ ಪ್ರಕಟಣೆಗಳನ್ನು ಪರಿಶೀಲಿಸಲಾಯಿತು.[5] ಪ್ರತಿಯೊಂದು ಸಂಸ್ಥೆಯ ಸ್ವರೂಪಗಳಿಗಾಗಿ ಕಾರ್ಯಾತ್ಮಕ ಪರಿಭಾಷೆಗಳನ್ನು ರೂಪಿಸಲು, ಈ ಕೇಂದ್ರಿತ ಸಮೀಕ್ಷೆಯ ಶೋಧನೆಯ ಫಲಿತಾಂಶಗಳನ್ನು ವಿಸ್ತೃತ ಸಮೀಕ್ಷೆಯಲ್ಲಿ ಗುರುತಿಸಲಾದ ಪರಿಭಾಷೆಗಳೊಂದಿಗೆ ಸಂಯೋಜಿಸಿ ವಿಕಸಿತಗೊಳಿಸಲಾಯಿತು (ಕೋಷ್ಟಕ 2.1 ಕುರಿತು ಖಾಸಗಿ ವಲಯದ ಸಂಕರತೆಯ ಸುಲಲಿತಗೊಳಿಸುವಿಕೆ ಎಂಬ ವಿಭಾಗದಲ್ಲಿ ಚರ್ಚಿಸಲಾಗಿದೆ). ಇದನ್ನು ಈ

---

[4] 1997ರ ಮೊದಲು ಯಾವುದೇ ಸಂಬಂಧಪಟ್ಟ ಸಾಹಿತ್ಯವು ದೊರಕಲಿಲ್ಲ. 2016ರ ಕೊನೆಯಲ್ಲಿ ಕೇಂದ್ರಿತ ಪರಿಶೀಲನೆಯ ಫಲಿತಾಂಶಗಳ ನಂತರ (ಎರಡನೇ ಪರಿಶೀಲನೆ), ಯಾವುದೇ ಮಾಹಿತಿಗಳ ಮೂಲಗಳು ತಪ್ಪಿಹೋಗಿಲ್ಲವೆಂದು ದೃಢಪಡಿಸಿಕೊಳ್ಳಲು ಒಂದನೇ ಸಮೀಕ್ಷೆಯನ್ನು ಮತ್ತೊಮ್ಮೆ ಪರಿಶೀಲಿಸಿದೆವು.

[5] ಇವುಗಳೆಂದರೆ: ಎ.ವಿ.ಪಿ.ಎನ್, ಬೆಲ್ಲೈಗಿಯೊ ಇನಿಷಟಿವ್, ಬಿಲ್ ಅಂಡ್ ಮೆಲಿಂಡಾ ಗೇಟ್ಸ್ ಫೌಂಡೇಷನ್, ಬ್ರೂಕಿಂಗ್ಸ್ ಇನ್ಸ್ಟಿಟ್ಯೂಷನ್, ಕನ್ಸಲ್ಟೇಟಿವ್ ಗ್ರೂಪ್ ಟು ಅಸಿಸ್ಟ ದ ಪ್ಯೂರ್, ಜಿ.ಐ.ಐ.ಎನ್, ಫೋರ್ಡ್ ಫೌಂಡೇಷನ್, ಫೌಂಡೇಷನ್ ಸೆಂಟರ್, ಗೋಲ್ಡ್ಮನ್ ಸ್ಯಾಕ್ಸ್, ಇಂಟರ್‌ನ್ಯಾಷನಲ್ ಫೈನಾನ್ಸ್ ಕಾರ್ಪರೇಷನ್, ಮಾಸ್ಟರ್‌ಕಾರ್ಡ್ ಫೌಂಡೇಷನ್, ಒ.ಇ.ಸಿ.ಡಿ, ಒಮಿಡ್ಯರ್ ನೆಟ್ವರ್ಕ್, ರಾಕ್ಫೆಲರ್ ಫೌಂಡೇಷನ್, ಯು.ಎನ್.ಡಿ.ಪಿ, ಇಸ್ತಾನ್ಬುಲ್ ಇಂಟರ್ನ್ಯಾಷನಲ್ ಸೆಂಟರ್ ಫಾರ್ ಪ್ರೈವೇಟ್ ಸೆಕ್ಟರ್ ಇನ್ ಡೆವೆಲಪ್‌ಮಂಟ್ (ಐ.ಐ.ಸಿ.ಪಿ.ಎಸ್.ಡಿ), ವರ್ಲ್ಡ್ ಬ್ಯಾಂಕ್ ಅಂಡ್ ವರ್ಲ್ಡ್ ಎಕನಾಮಿಕ್ ಫೋರಂ.

ಕೆಳಗೆ ಚರ್ಚಿಸಲಾದ ದತ್ತಸಂಚಯಕ್ಕಾಗಿ ಪಡೆದುಕೊಂಡ ಸಂಬಂಧಪಟ್ಟ ಸಂಸ್ಥೆಗಳ ಉಪ-ಮಾದರಿಯನ್ನು ಅನುಸರಿಸಿ ಪರೀಕ್ಷಿಸಲಾಯಿತು.

ಕೋಷ್ಟಕ 2.1: ಸಾಹಿತ್ಯದಲ್ಲಿ ನಿಯಮಿತವಾಗಿ ಕಾಣಿಸಿಕೊಳ್ಳುವ ಕಾರ್ಯ ನಿರ್ವಾಹಕರ ಆಯ್ದ ಪೂರ್ವ ನಿರ್ಧಾರಿತ ವ್ಯಾಖ್ಯಾನಗಳು.

	ಸಂಸ್ಥೆಗಳ ಸ್ವರೂಪ.	ಸಾಹಿತ್ಯದಲ್ಲಿನ ಪೂರ್ವನಿರ್ಧರಿತ ವ್ಯಾಖ್ಯಾನಗಳು.
ಪರೋಪಕಾರಿ ಕಾರ್ಯನಿರ್ವಾಹಕರು	ಪರೋಪಕಾರಿ ಪ್ರತಿಷ್ಠಾನಗಳು	ಬಹುತೇಕ ಉಲ್ಲೇಖಗಳು ಪರೋಪಕಾರಿ ಪ್ರತಿಷ್ಠಾನಗಳನ್ನು ಈ ಕೆಳಗಿನಂತೆ ಉಲ್ಲೇಖಿಸುತ್ತವೆ.: • ಸರ್ಕಾರೇತರ • ಲಾಭರಹಿತ • ತನ್ನದೇ ಮೂಲ ನಿಧಿಯನ್ನು ಹೊಂದಿರುವ • ಸ್ವಂತ ಟ್ರಸ್ಟಿಗಳು ಮತ್ತು ನಿರ್ದೇಶಕರಿಂದ ನಿರ್ವಹಿಸಲಾಗುವ ಪ್ರತಿಷ್ಠಾನಗಳು. • ಸಾಮಾಜಿಕ, ಶೈಕ್ಷಣಿಕ, ಧರ್ಮಾರ್ಥ, ಧಾರ್ಮಿಕ ಅಥವಾ ಇತರ ಸಾರ್ವಜನಿಕ ಕಲ್ಯಾಣಕ್ಕೆ ಸೇವೆ ಸಲ್ಲಿಸುವ ಚಟುವಟಿಕೆಗಳನ್ನು ಉತ್ತೇಜಿಸುವ ಪ್ರತಿಷ್ಠಾನಗಳು. ಕೆಲವರು ಖಾಸಗಿ ಪ್ರತಿಷ್ಠಾನಗಳು (ವ್ಯಕ್ತಿಗತ ದಾನಿಗಳು ಅಥವಾ ಕುಟುಂಬಗಳಿಂದ ನೀಡಲ್ಪಟ್ಟ ಸ್ವಂತ ನಿಧಿಗಳನ್ನು ಹೊಂದಿರುವ) ಮತ್ತು ಸಾರ್ವಜನಿಕ ಪ್ರತಿಷ್ಠಾನಗಳನ್ನು (ಸಾರ್ವಜನಿಕ ದೇಣಿಗೆಗಳನ್ನು ಒಳಗೊಂಡಂತೆ ಅನೇಕ ಮೂಲಗಳಿಂದ ಧನ ಸಹಾಯ ಪಡೆಯುವ) ಪ್ರತ್ಯೇಕಿಸುತ್ತಾರೆ (Martens & Seitz, 2015). ಪ್ರತಿಷ್ಠಾನ ಕೇಂದ್ರವು ನಾಲ್ಕು ವಿಧದ ಪ್ರತಿಷ್ಠಾನಗಳನ್ನು ವಿಂಗಡಿಸುತ್ತದೆ (ಫೌಂಡೇಷನ್ ಸೆಂಟರ್, (2013, ಪು. 3): • ಸ್ವತಂತ್ರ ಪ್ರತಿಷ್ಠಾನಗಳು: ಸಾಮಾನ್ಯವಾಗಿ

			ವ್ಯಕ್ತಿಗತ ದಾನಿಗಳ ಅಥವಾ ಅವರ ಕುಟುಂಬಗಳಿಂದ ಸ್ಥಾಪಿಸಲ್ಪಟ್ಟಿದ್ದು, ಮುಖ್ಯವಾಗಿ ಅನುದಾನವನ್ನು ನೀಡುವ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುತ್ತವೆ. • ಪರಿಚಾಲನಾ ಪ್ರತಿಷ್ಠಾನಗಳು: ಇವು ತಮ್ಮದೇ ಕಾರ್ಯಕ್ರಮಗಳನ್ನು ನಡೆಸುತ್ತವೆ. ಆದರೆ ಕೆಲವು ಅನುದಾನಗಳನ್ನು ಕೂಡ ನೀಡುತ್ತವೆ ಸಾಮಾನ್ಯವಾಗಿ ಇವುಗಳನ್ನು ವ್ಯಕ್ತಿಗತ ದಾನಿಗಳು ಅಥವಾ ದಾನಿಗಳ ಕುಟುಂಬಗಳು ಸ್ಥಾಪಿಸುತ್ತವೆ. • ಕಾರ್ಪರೆಟ್ ಪ್ರತಿಷ್ಠಾನಗಳು: ದೊಡ್ಡ ನಿಗಮಗಳಿಂದ ಹಿಡಿದು ಕುಟುಂಬದ ಸ್ವಾಮ್ಯದಲ್ಲಿರುವ ವಿಭಾಗಗಳವರೆಗಿನ ವ್ಯವಹಾರ ಸಂಸ್ಥೆಗಳ ಮೂಲಕ ಸ್ಥಾಪಿಸಲ್ಪಟ್ಟಿರುತ್ತವೆ. ಆದರೆ ಕಾನೂನುಬದ್ಧವಾದ ಸ್ವತಂತ್ರ ಘಟಕಗಳಾಗಿರುತ್ತವೆ. • ಸಾಮುದಾಯಿಕ ಪ್ರತಿಷ್ಠಾನಗಳು: ಸಾರ್ವಜನಿಕ ಮತ್ತು ಖಾಸಗಿ ಮೂಲಗಳಿಂದ ನಿಧಿಗಳನ್ನು ಸಂಗ್ರಹಿಸಿ ಮುಖ್ಯವಾಗಿ ಸೀಮಿತ ಭೌಗೋಳಿಕ ಪ್ರದೇಶದ ಒಳಗೆ ಅನುದಾನವನ್ನು ನೀಡುವ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುತ್ತವೆ. ಸಂಯುಕ್ತ ರಾಷ್ಟ್ರಗಳ (UN) ಅಭಿವೃದ್ಧಿ ಸಹಕಾರ ವೇದಿಕೆಯು ಪ್ರತಿಷ್ಠಾನಗಳ ಪ್ರಕಾರವನ್ನು ತನ್ನ ಹಣಕಾಸಿನ ಮೂಲದ ಆಧಾರದ ಮೇಲೆ ಗುರುತಿಸಲು ಸೂಚಿಸುತ್ತದೆ. ಈ ಕೆಳಗಿನವುಗಳು

		ಇದರಲ್ಲಿ ಸೇರಿವೆ: • ಖಾಸಗಿ ದತ್ತಿ: ವ್ಯಕ್ತಿಗತ ಅಥವಾ ಕುಟುಂಬದ ದೊಡ್ಡ ದತ್ತಿಗಳಿಂದ ಆರ್ಥಿಕ ನೆರವು ಪಡೆಯುವ ಪ್ರತಿಷ್ಠಾನಗಳು. • ಕಾರ್ಪರೆಟ್: ದೊಡ್ಡ ನಿಗಮದ ದತ್ತಿಗಳಿಂದ ಆರ್ಥಿಕ ನೆರವು ಪಡೆಯುವ ಪ್ರತಿಷ್ಠಾನಗಳು. • ಸಮುದಾಯ ಆಧಾರಿತ: ಸಮುದಾಯದ ನಿಧಿಗಳ ಮೂಲಕ ಆರ್ಥಿಕ ನೆರವು ಪಡೆಯುವ ಪ್ರತಿಷ್ಠಾನಗಳು. • ಮಿಶ್ರಿತ ವಿತ್ತಪೋಷಣ(funding): ವ್ಯಕ್ತಿಗಳು, ನಿಗಮಗಳು, ಇತರ ಖಾಸಗಿ ಪ್ರತಿಷ್ಠಾನಗಳು ಮತ್ತು ಸರ್ಕಾರಿ ಸಂಸ್ಥೆಗಳನ್ನು ಒಳಗೊಂಡಂತೆ ಅನೇಕ ಮೂಲಗಳಿಂದ ನಿಧಿಗಳನ್ನು ಸ್ವೀಕರಿಸುವ ಪ್ರತಿಷ್ಠಾನಗಳು. ದಕ್ಷಿಣ ವಲಯದ ಖಾಸಗಿ ಪರೋಪಕಾರಿ ಸಂಸ್ಥೆಗಳಿಗೆ ಸಾಮಾನ್ಯ ಮಾದರಿಯಾಗಿ ಇದನ್ನು ವಿವರಿಸಲಾಗಿದೆ. ಇವುಗಳಿಗೆ ದಕ್ಷಿಣದ ಶ್ರೀಮಂತ ವ್ಯಕ್ತಿಗಳು ಮತ್ತು ನಿಗಮಗಳು, ಸಾರ್ವಜನಿಕ ದೇಣಿಗೆಗಳ ಜೊತೆಗೆ, ಉತ್ತರ ಭಾಗದ ದಾನಿಗಳು ಮತ್ತು ಪ್ರತಿಷ್ಠಾನಗಳಿಂದಲೂ ಆರ್ಥಿಕ ಬೆಂಬಲ ಲಭ್ಯವಾಗುತ್ತದೆ. (ECOSOC, 2012, ಪು. 2) ಪ್ರತಿಷ್ಠಾನಗಳು ಅನುದಾನದಾತರಾಗಿ ಕಾರ್ಯ ನಿರ್ವಹಿಸಬಹುದು. ಇವು ನಿರ್ಣಾಯಕ ಕಾರ್ಯ ನಿರ್ವಾಹಕರು (ಸಾಮಾನ್ಯವಾಗಿ ಎನ್. ಜಿ. ಓ ಗಳು) ಜಾರಿಗೊಳಿಸುವ ಯೋಜನೆಗಳು ಮತ್ತು ಕಾರ್ಯಕ್ರಮಗಳಿಗೆ ಹಣಕಾಸು ಒದಗಿಸಬಹುದು ಅಥವಾ ತಮ್ಮದೇ ಯೋಜನೆಗಳು ಮತ್ತು

		ಕಾರ್ಯಕ್ರಮಗಳಿಗೆ ಹಣಕಾಸು ಒದಗಿಸಿ ಅವನ್ನು ಜಾರಿಗೊಳಿಸಬಹುದು (ಮಾರ್ಟಿನ್ ಮತ್ತು ವಿಟ್ಟೆ, 2008)
ಪರೋಪಕಾರಿ ಕಾರ್ಯನಿರ್ವಾಹಕರು	ಯುಕ್ತಿಪೂರ್ಣ ಪರೋಪಕಾರಿ ಸಂಸ್ಥೆಗಳು	ಕಾರ್ಯತಂತ್ರ ರೂಪಿಸಿಕೊಂಡು ಕೆಲಸ ಮಾಡುವ ಪರೋಪಕಾರಿ ಸಂಸ್ಥೆಗಳು ನಿರ್ದಿಷ್ಟ ಮೌಲ್ಯಗಳು, ಗುರಿಗಳಿಂದ ಮಾರ್ಗದರ್ಶಿತವಾದ ದೃಷ್ಟಿಕೋನವನ್ನು ಅನುಸರಿಸುವ ಮೂಲಕ ಹೆಚ್ಚಿನ ಪರಿಣಾಮವನ್ನು ಸಾಧಿಸಲು ಪ್ರಯತ್ನಿಸುತ್ತವೆ. ಇವು ಸ್ಪಷ್ಟ ಗುರಿಗಳನ್ನು ಹಾಗೂ ಸಂಬಂಧಿತ ಕಾರ್ಯಕ್ಷಮತೆಯ ಸೂಚಕಗಳನ್ನು ಹೊಂದಿರುತ್ತವೆ, ತಾಂತ್ರಿಕ ಬೆಂಬಲವನ್ನು (ಕೌಶಲ್ಯ, ಸಾಮರ್ಥ್ಯ, ಮತ್ತು ಅನುಭವವನ್ನು ಹಂಚಿಕೊಳ್ಳುವ ಮೂಲಕ) ಒದಗಿಸುತ್ತವೆ ಮತ್ತು ಹಣಕಾಸಿನ ನೆರವಿನ ಜೊತೆಗೆ ಹೂಡಿಕೆ ಸ್ವೀಕರಿಸುವ ಸಂಸ್ಥೆಗಳಿಗೆ ನೇರ ಆಡಳಿತ ಮೇಲ್ವಿಚಾರಣೆಯನ್ನೂ ಒದಗಿಸುತ್ತವೆ (ಚಿಯಾ, 2015).
	ಉದ್ಯಮ ಪರೋಪಕಾರಿಗಳು	ಉದ್ಯಮ ಪರೋಪಕಾರವು ಸಾಮಾಜಿಕ ಉದ್ದಿಮೆಗಳಿಗಾಗಿ ಹಣಕಾಸು ಒದಗಿಸುತ್ತದೆ. ಪಾರಂಪರಿಕ ಉದ್ಯಮದ ಬಂಡವಾಳಶಾಹಿಯಂತೆಯೇ ಇವು ತಮ್ಮ ಹೂಡಿಕೆ ಪಟ್ಟಿಯಲ್ಲಿರುವ ಸಂಸ್ಥೆಗಳಿಗೆ ಬಂಡವಾಳ ಮತ್ತು ಮೌಲ್ಯವರ್ಧಿತ ಸೇವೆಗಳನ್ನು ಒದಗಿಸುತ್ತವೆ. ಆದರೆ ಇವು ಹೂಡಿಕೆಯ ನಿಟ್ಟಿನ ಸಾಮಾಜಿಕ ಪ್ರತಿಫಲವನ್ನು ಗರಿಷ್ಠಗೊಳಿಸುವುದನ್ನು ವಿಶೇಷ ಗುರಿಯಾಗಿ ಹೊಂದಿರುತ್ತದೆ (ಸ್ಕಾರ್ ಲೆಟಾ ಮತ್ತು ಆಲೆಮನಿ, 2010) ಇದು ವಿತ್ತೀಯ(financial) ಮತ್ತು

		ವಿತ್ತೀಯವಲ್ಲದ ಸಂಪನ್ಮೂಲಗಳನ್ನು ಸಂಯೋಜಿಸಿ, ಅಭಿವೃದ್ಧಿ ಸವಾಲುಗಳಿಗೆ ಆತ್ಮನಿರ್ಭರ, ವ್ಯವಸ್ಥಿತ ಮತ್ತು ವಿಸ್ತರಿಸಬಹುದಾದ ಪರಿಹಾರಗಳನ್ನು ಗುರುತಿಸಿ ಬೆಂಬಲಿಸುತ್ತದೆ. ಇದರ ಗುರಿ ಅತಿ ಹೆಚ್ಚಿನ ಪರಿಣಾಮವನ್ನು ಸಾಧಿಸುವುದಾಗಿದೆ (OECD ಡೆವಲಪ್‌ಮೆಂಟ್ ಸೆಂಟರ್, 2014; ಸ್ಕಾರ್ಲೆಟಾ ಮತ್ತು ಆಲೆಮನಿ, 2010). ಪರೋಪಕಾರಿ ಉದ್ಯಮ ಸಂಸ್ಥೆಗಳು ವಿಸ್ತರಿಸಲು ಬಯಸುವ ಆದರೆ ಹಣಕಾಸು ಬಂಡವಾಳವಿಲ್ಲದ ಸಾಮಾಜಿಕ ಉದ್ಯಮಗಳನ್ನು (ಲಾಭೋದ್ದೇಶಿತ ಹಾಗೂ ಲಾಭರಹಿತ) ಗುರುತಿಸುತ್ತವೆ. ಪಾರಂಪರಿಕ ಉದ್ಯಮ ಬಂಡವಾಳದಂತೆಯೇ ಇವು ಸಾಮಾಜಿಕ ಉದ್ಯಮದ ಜೊತೆ ಔಪಚಾರಿಕ ಒಪ್ಪಂದ ಮಾಡಿಕೊಳ್ಳುವ ಮೊದಲು ವಿಶೇಷ ಪರಿಶೀಲನೆ ಮಾಡುತ್ತವೆ. ಸಾಮಾನ್ಯವಾಗಿ, ಹಣಕಾಸು ಬೆಂಬಲವನ್ನು (ಅನುದಾನ, ಸಾಲ, ಅಥವಾ ಸಾಮಾನ್ಯ ಷೇರುಗಳ ರೂಪದಲ್ಲಿ) ನಿರ್ದಿಷ್ಟ ವರ್ಷಗಳ ಕಾಲ ನೀಡಲಾಗುತ್ತದೆ. ಇವು ಸಾಮಾಜಿಕ ಹೂಡಿಕೆಯಲ್ಲಿ ಕಾರ್ಯಕ್ಷಮತೆ-ಆಧಾರಿತ ದೃಷ್ಟಿಕೋನವನ್ನು ಅನುಸರಿಸುತ್ತವೆ. ಹೂಡಿಕೆ ಸ್ವೀಕರಿಸಿದವರ ಕಾರ್ಯಕ್ಷಮತೆಯನ್ನು ಪರಿಭಾಷಿತ ಗುರಿಗಳು, ಉದ್ದೇಶಗಳು ಮತ್ತು ನಿರ್ದಿಷ್ಟ ಅವಧಿಯ ನಿಟ್ಟಿನಲ್ಲಿಮೇಲ್ವಿಚಾರಣೆ ಮಾಡಲಾಗುತ್ತದೆ. ಪಾರದರ್ಶಕ ವರದಿ ಮತ್ತು ಸಾಮಾಜಿಕ ಪರಿಣಾಮವನ್ನು ಕುರಿತ ಸ್ಪಷ್ಟ ಪರಿಭಾಷಿತ ಮಾನದಂಡಗಳು ಮತ್ತು ಪರೋಪಕಾರಿ ಉದ್ಯಮದ ನಿರ್ಗಮನ ಕಾರ್ಯನೀತಿಗಳನ್ನು ಒತ್ತಿ ಹೇಳಲಾಗುತ್ತದೆ.

ಸಂಬಂಧಪಟ್ಟ ಇತರೆ ಕಾರ್ಯನಿರ್ವಾಹಕರು		ಒಪ್ಪಂದದ ಅಂತ್ಯದಲ್ಲಿ, ಉದ್ಯಮ ಪರೋಪಕಾರಿಗಳು ತಮ್ಮ ಮೂಲ ಬಂಡವಾಳ ಅಥವಾ ಲಾಭಾಂಶವನ್ನು ಸಂಗ್ರಹಿಸಿ ನಿರ್ಗಮಿಸುತ್ತಾರೆ (ಚಿಯಾ, 2015)
	ಉದ್ಯಮಕ್ಕೆ ಬೆಂಬಲ ನೀಡುವ ಹೂಡಿಕೆದಾರರು (angel investors)	ಉದ್ಯಮಕ್ಕೆ ಬೆಂಬಲ ನೀಡುವ (angel investors) ಹೂಡಿಕೆದಾರರು ಅತಿ ಹೆಚ್ಚು ನಿವ್ವಳ ಸಂಪತ್ತನ್ನು ಹೊಂದಿರುವವರು. ಇವರು ಸಂಸ್ಥೆಗೆ ಮೂಲ ಅಥವಾ ಆರಂಭಿಕ ಹಂತದ ವಿತ್ತಪೋಷಣೆ(funding)ಯನ್ನು ಆಗಾಗ್ಗೆ ಉದ್ಯಮದಲ್ಲಿನ ಷೇರಿನ ಬದಲಿಗೆ, ಒದಗಿಸುತ್ತಾರೆ. ಏಂಜಲ್ ಹೂಡಿಕೆದಾರರು ವ್ಯಕ್ತಿಗತವಾಗಿ, ಅನೌಪಚಾರಿಕ ಗುಂಪುಗಳಲ್ಲಿ, ಅಥವಾ ಅಧಿಕೃತ ಏಂಜಲ್ ಜಾಲ(networks)ಗಳ ಭಾಗವಾಗಿ ಕಾರ್ಯ ನಿರ್ವಹಿಸಬಹುದು (ಜಾನ್, 2014; ವರ್ಲ್ಡ್ ಎಕನಾಮಿಕ್ ಫೋರಂ, 2016).
	ಕಾರ್ಪರೆಟ್ ಸಾಮಾಜಿಕ ಜವಾಬ್ದಾರಿಯ ಘಟಕ	ಕಾರ್ಪರೆಟ್ ಸಾಮಾಜಿಕ ಜವಾಬ್ದಾರಿ (CSR) ಘಟಕಗಳು ಸ್ವತಂತ್ರ ಸಂಸ್ಥೆಗಳಾಗಿಯೂ ಅಥವಾ ನಿಗಮದ ಉಪ-ಘಟಕಗಳಾಗಿಯೂ ಕಾರ್ಯ ನಿರ್ವಹಿಸಬಹುದು. ಸಿ ಎಸ್ ಆರ್ ಉಪಕ್ರಮಗಳು ಸಾಮಾಜಿಕ ಹಿತವನ್ನು ಮುಂದುವರಿಸಲು ಸಂಸ್ಥೆ ಕೈಗೊಳ್ಳುವ ಚಟುವಟಿಕೆಗಳು, ಯೋಜನೆಗಳು, ಕಾರ್ಯಕ್ರಮಗಳು, ಮತ್ತು ದೇಣಿಗೆಗಳನ್ನು ಒಳಗೊಂಡಿರಬಹುದು. ಸಿ ಎಸ್ ಆರ್ ಉಪಕ್ರಮಗಳು ಸಂಸ್ಥೆಯೊಂದರ ಉದ್ಯೋಗಿಗಳು ಮತ್ತು ಅವರ ಕುಟುಂಬಗಳನ್ನು ಗುರಿಯಾಗಿಸಿಕೊಂಡ ಆಂತರಿಕ ಕಾರ್ಯಕ್ರಮಗಳಾಗಿಯೂ, ಅಥವಾ ಸಂಸ್ಥೆ ಕಾರ್ಯ ನಿರ್ವಹಿಸುವ ವ್ಯಾಪಕ

		ಸಮುದಾಯವನ್ನು ಕುರಿತು ಗಮನವನ್ನು ಕೇಂದ್ರೀಕರಿಸುವ ಬಾಹ್ಯ ಕಾರ್ಯಕ್ರಮಗಳಾಗಿಯೂ ಇರಬಹುದು. ಸಿ ಎಸ್ ಆರ್(CSR) ಲಾಭದಿಂದ ಪ್ರೇರಿತವಾಗಿರುದಿಲ್ಲವಾದರೂ, ಸಿ ಎಸ್ ಆರ್ (CSR) ಕಾರ್ಯಕ್ರಮಗಳು ಸಂಸ್ಥೆಗೆ ಲಾಭವನ್ನು ತರುತ್ತವೆ. ಅವೆಂದರೆ, ಆರ್ಥಿಕ ಕಾರ್ಯಕ್ಷಮತೆಯಲ್ಲಿ ಹೆಚ್ಚಳ, ಪ್ರಸಿದ್ಧಿಯ ವರ್ಧನೆ, ಉದ್ಯೋಗಿಗಳ ಸಹಭಾಗಿತ್ವ ಮತ್ತು ಧಾರಣಶಕ್ತಿಯ ವೃದ್ಧಿ (ಭಾಂಜಿ, 2008; ಯುನೈಟೆಡ್ ನೇಶನ್ಸ್ ಡೆವೆಲಪ್‌ಮೆಂಮೆಂಟ್ ಪ್ರೋಗ್ರಾಂ, 2014; Valor, 2005) ಇದರ ಪರಿಣಾಮವಾಗಿ, ಉದ್ಯಮಕ್ಕೆ ಮಾರುಕಟ್ಟೆಗಳಲ್ಲಿ ಹೆಚ್ಚಿನ ಮಾನ್ಯತೆ ದೊರೆತು, ಅಂದರೆ ಫಲವಾಗಿ ಸಂಸ್ಥೆಗೆ ಹೆಚ್ಚುವರಿ ಲಾಭ ದೊರೆಯಬಹುದು.
	ಪೋಷಕಗಳು/ವೇಗವರ್ಧಕಗಳು	ಉದ್ದಿಮೆಯ ವೇಗವರ್ಧಕಗಳು ಮತ್ತು ಪೋಷಕಗಳು (ಆರಂಭಿಕ(seed) ಅಥವಾ ಉದ್ಯಮ ಪೋಷಕಗಳು/ವೇಗವರ್ಧಕಗಳು ಎಂದು ಸಹ ಕರೆಯಲಾಗುತ್ತದೆ) ಪ್ರಾರಂಭಿಕ ಹಂತದ ಸಾಮಾಜಿಕ ಉದ್ದಿಮೆಗಳನ್ನು ಕಾರ್ಯಸಾಧ್ಯಗೊಳಿಸಲು ಉದ್ಯಮದ ಆರಂಭಿಕ ಹಂತದಲ್ಲಿ ಬೆಂಬಲವನ್ನು ಒದಗಿಸುತ್ತವೆ (ಒಮಿಡ್ಯರ್ ನೆಟ್ವರ್ಕ್, 2013; Schwab Foundation for Social Entrepreneurship, 2013). ಉದ್ಯಮಿಗಳಿಗೆ ಹೊಸ ಗ್ರಾಹಕರನ್ನು ಕಂಡುಹಿಡಿಯಲು, ಅವರಿಗೆ ಸೇವೆ ನೀಡಲು ಮತ್ತು ತಮ್ಮ ಉದ್ಯಮವನ್ನು ವಿಸ್ತರಿಸಲು ಉಚ್ಚ-ಸ್ತರೀಯ ಸಹಾಯದ ಅಗತ್ಯವಿರುವ ಕಾರಣ, ಸಾಮಾನ್ಯವಾಗಿ ಇವುಗಳು ಸೀಮಿತ ಸಂಖ್ಯೆಯ ಕಂಪೆನಿಗಳ ಮೇಲೆ ಗಮನ

		ಹರಿಸಿದಾಗ ಹೆಚ್ಚು ಪರಿಣಾಮಕಾರಿಯಾಗುತ್ತವೆ ಎಂದು ಒಪ್ಪಿಕೊಳ್ಳಲಾಗುತ್ತದೆ. (ಓಮಿಡ್ಯರ್ ನೆಟ್ವರ್ಕ್, 2013, ಪು. 14). ಆರಂಭಿಕ ಹಂತದ ಉದ್ಯಮಗಳನ್ನು ಸಾಮಾನ್ಯವಾಗಿ ಅವರ ಪ್ರಸ್ತಾವನೆಗಳು ಮತ್ತು ಹಿನ್ನೆಲೆಯ ಆಧಾರದ ಮೇಲೆ ಸ್ಪರ್ಧಾತ್ಮಕ ಪ್ರಕ್ರಿಯೆಗಳ ಮೂಲಕ ಆಯ್ಕೆ ಮಾಡಲಾಗುತ್ತದೆ. ಇದರಲ್ಲಿ ಭಾಗವಹಿಸುವ ಚಿಕ್ಕ ತಂಡಗಳ ಸಾಮಾಜಿಕ ಉದ್ಯಮಿಗಳು ನಿಗದಿತ ಅವಧಿಯಲ್ಲಿ ಗಹನವಾದ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾರೆ. ಕಾರ್ಯಕ್ರಮದಲ್ಲಿ, ಭಾಗವಹಿಸುವವರು ಸಾಮಾನ್ಯವಾಗಿ ಕಾರ್ಯಕ್ರಮದ ಸ್ಥಾಪಕರನ್ನು ಹಾಗೂ ಇತರ ಮಾರ್ಗದರ್ಶಕರನ್ನು ಸಂಪರ್ಕಿಸಬಹುದಾಗಿದೆ. ಮತ್ತು ಅವರಿಗೆ ಉದ್ಯಮ ಮತ್ತು ಉತ್ಪನ್ನಕ್ಕೆ ಸಂಬಂಧಿಸಿದ ಸಲಹೆಯನ್ನಾಧರಿಸಿ, ಶೈಕ್ಷಣಿಕ ಹಾಗೂ ಮಾಹಿತಿಪೂರ್ಣ ಸಂಪನ್ಮೂಲಗಳು ದೊರೆಯುತ್ತವೆ. ಪೋಷಕಗಳು (Incubators) ಮುಖ್ಯವಾಗಿ ಮಾರ್ಗದರ್ಶನ ಮತ್ತು ತರಬೇತಿಗೆ ಗಮನಹರಿಸುತ್ತವೆ. ವೇಗವರ್ಧಕಗಳು (Accelerators) ಆರಂಭಿಕ ಹೂಡಿಕೆಯನ್ನು ಪಡೆಯುವ ಅವಕಾಶಗಳನ್ನು ಸಹ ಒದಗಿಸಬಹುದು (ಆಕರ್‌ಮನ್, 2015; ಓಮಿಡ್ಯರ್ ನೆಟ್ವರ್ಕ್, 2013).
	Micro-finance ಹೂಡಿಕೆ ಸಾಧನಗಳು	Micro-finance ಸೂಕ್ಷ್ಮ ಹಣಕಾಸು ಯೋಜನೆಯು ಅತ್ಯಂತ ಅಭಿವೃದ್ಧಿಯಾಗಿರುವ ಕ್ಷೇತ್ರಗಳಲ್ಲಿ ಒಂದಾಗಿದೆ. ಇದು ಕಡಿಮೆ ಆದಾಯ ಹೊಂದಿರುವ ಆದರೆ ಆರ್ಥಿಕವಾಗಿ ಸಕ್ರಿಯವಾಗಿರುವ ಕುಟುಂಬಗಳು ಮತ್ತು ಸಣ್ಣ ಉದ್ಯಮಗಳಿಗೆ ಹಣಕಾಸು ದೊರಕಿಸುವುದಕ್ಕೆ ಸಹಾಯ ಮಾಡುತ್ತದೆ (ಸ್ಕೋಲ, ಸೋಸೋರಿಯನ್,

ಇತರ ಸಂಬಂಧಪಟ್ಟ ಕಾರ್ಯನಿರ್ವಾಹಕರು		ಡೊಮಿನಿಕ್, ಪರಾಶ್ಕೆವೋವಾ ಮತ್ತು ನಾರಾಯಣನ್, 2016, ಸ್ಟೀರ್ ಮತ್ತು ಇತರರು., 2015) ಇವುಗಳನ್ನು ಪರಿಣಾಮಕಾರಿ ಹೂಡಿಕೆಯ ಪೂರ್ವಸೂಚಕಮುನ್ನೋಟ ಅಥವಾ ಅದರ ಒಂದು ಪ್ರಕಾರವೆಂದು ನೋಡಬಹುದು. (ಸ್ಕೋಲ, ಮತ್ತು ಇತರರು 2016).
	ಸಂಪರ್ಕಜಾಲಗಳು	ಔಪಚಾರಿಕ ಸಂಪರ್ಕಜಾಲಗಳು ಕ್ಷೇತ್ರದಲ್ಲಿನ ಕಾರ್ಯನಿರ್ವಾಹಕರ ಕಲಿಕೆ, ಚರ್ಚೆ, ಮತ್ತು ಸಹಕಾರದ ಅವಕಾಶಗಳನ್ನು ಬೆಂಬಲಿಸುತ್ತವೆ. ಅವು ಸೇವೆಯ ವಿತರಣೆಯನ್ನು ವಿಸ್ತರಿಸಲು, ಮಾಹಿತಿಯ ಹಂಚಿಕೆಯನ್ನು ಸುಧಾರಿಸಲು, ಕಾರ್ಯಕ್ಷಮತೆಯ ಮಾನದಂಡಗಳನ್ನು ನಿಗದಿ ಪಡಿಸಲು ಮತ್ತು ಗುಂಪುಗಳನ್ನು ಸಬಲೀಕರಿಸಲು ಸಹಾಯಕವಾಗಿವೆ (ಇಂಟರ್‌ನ್ಯಾಷನಲ್ ಫೈನಾನ್ಸ್ ಕಾರ್ಪರೇಷನ್, 2010; O'Flanagan, ಹೆರಾಲ್ಡ್, ಮತ್ತು ಬ್ರೆಸ್ಟ್, 2008).
	ಸಾಮಾಜಿಕ ಉದ್ಯಮ	ಸಾಮಾಜಿಕ ಉದ್ಯಮವೆಂಬುದು ಔದ್ಯಮಿಕ ದೃಷ್ಟಿಕೋನಗಳು ಮತ್ತು ವ್ಯಾವಹಾರಿಕ ಸಿದ್ಧಾಂತಗಳ ಮೂಲಕ ಸಾಮಾಜಿಕ ಮತ್ತು ಪಾರಿಸರಿಕ ಉದ್ದೇಶಗಳನ್ನು ಅನುಸರಿಸುವ ವಾಣಿಜ್ಯ ಸಂಸ್ಥೆ. ಇದನ್ನು ಸಾಮಾಜಿಕ ಉದ್ದೇಶದ ಸಂಸ್ಥೆ (SPO) ಎಂದು ಸಹ ಕರೆಯಲಾಗುತ್ತದೆ (ಏಷಿಯನ್ ವೆಂಚರ್ ಫಿಲಾಂಥ್ರುಪಿ ನೆಟ್‌ವರ್ಕ್, 2016; OECD ಡೆವಲಪ್‌ಮೆಂಟ್ ಸೆಂಟರ್, 2014; ಯುನೈಟೆಡ್ ನೇಷನ್ಸ್ ಡೆವಲಪ್‌ಮೆಂಟ್ ಪ್ರೋಗ್ರಾಂ, 2014).
	(ಸಾಮಾಜಿಕ) ಪರಿಣಾಮಕಾರಿ ಹೂಡಿಕೆದಾರರು	ಇವುಗಳನ್ನು ಸಾಮಾಜಿಕ ಪ್ರಭಾವಿ ಹೂಡಿಕೆ

		ಅಥವಾ ಪರಿಣಾಮಕಾರಿ ಹೂಡಿಕೆ ಎಂದು ಕರೆಯಲಾಗುತ್ತದೆ. ಅಂದರೆ ಸಾಮಾಜಿಕ ಮತ್ತು ಆರ್ಥಿಕ ಲಾಭ ಎರಡನ್ನೂ ಪಡೆಯುವುದನ್ನು ಉದ್ದೇಶಿಸಿರುತ್ತದೆ. ಹೂಡಿಕೆದಾರರು ಸಹಾಯ ಧನವನ್ನು ನೀಡುವುದಿಲ್ಲ, ಬದಲಾಗಿ ಸಾಲ ಅಥವಾ ಬಂಡವಾಳವನ್ನು ಒದಗಿಸುತ್ತಾರೆ. ಪ್ರಭಾವಿ ಹೂಡಿಕೆದಾರರು ಸಾಮಾನ್ಯವಾಗಿ ನಿರ್ದಿಷ್ಟ ಸಾಮಾಜಿಕ ಪರಿಣಾಮದ ಮೇಲೆ ಕೇಂದ್ರೀಕೃತವಾದ ನಿಧಿಗಳಿಗೆ ಕೊಡುಗೆ ನೀಡುತ್ತಾರೆ. ವ್ಯಾವಹಾರಿಕ ಪ್ರಗತಿ ಸೂಚಕಗಳ ಮೇಲೆ ಅವಲಂಬಿತರಾಗಿರುತ್ತಾರೆ. ಒಂದು ವ್ಯಾಖ್ಯಾನದ ಪ್ರಕಾರ ಉದ್ಯಮ ಪರೋಪಕಾರಕ್ಕಿಂತ ಭಿನ್ನವಾಗಿ, ಸಾಮಾಜಿಕ ಪರಿಣಾಮಕಾರಿ ನಿಧಿಗಳು ಹೂಡಿಕೆದಾರರಿಂದ ನಿರ್ವಹಿಸಲ್ಪಡುವುದಿಲ್ಲ, ಬದಲಿಗೆ ಲಾಭವನ್ನು ಬೆಂಬಲಿಸುವ ಸಂಸ್ಥೆಗಳ ಮೂಲಕ ನಿರ್ವಹಿಸಲಾಗುತ್ತದೆ (ಚಿಯಾ, 2015). ಹೂಡಿಕೆದಾರರ ಗುರಿಗಳ ಅವಲಂಬನೆಯ ಮೇಲೆ, ಇಂತಹ ನಿಧಿಗಳು ಆರ್ಥಿಕ ಲಾಭವಿಲ್ಲದೆ ಪ್ರಮುಖ ಸಾಮಾಜಿಕ ಅಗತ್ಯಗಳನ್ನು ತೃಪ್ತಿಪಡಿಸಬಹುದಾದ ಯೋಜನೆಗಳನ್ನು ಪರಿಗಣಿಸದೆ ಇರಬಹುದು. ಹೂಡಿಕೆಗಾಗಿ ಇರುವ ಪ್ರೇರಣೆ ನಿಧಿಯಿಂದ ನಿಧಿಗೆ ಬದಲಾಗುತ್ತದೆ. ಕೆಲ ಸಂದರ್ಭಗಳಲ್ಲಿ ಲಾಭದ ಆಸೆ ನಿರ್ಣಾಯಕ ಅಂಶವಾಗಬಹುದು. ಆದರೆ ಇತರ ಸಂದರ್ಭಗಳಲ್ಲಿ ಸಾಮಾಜಿಕ ಉದ್ದೇಶಗಳು ಮುಖ್ಯವಾಗಿರುತ್ತವೆ (ಏಷ್ಯನ್ ಡೆವೆಲಪ್ ಮೆಂಟ್ ಬ್ಯಾಂಕ್, 2011; ಚಿಯಾ, 2015; OECD ಡೆವೆಲಪ್ ಮೆಂಟ್ ಸೆಂಟರ್, 2014).

ಪೂರ್ವ ನಿರ್ಧರಿತ ವ್ಯಾಖ್ಯಾನಗಳು ಮತ್ತು ವಿವೇಚನಾತ್ಮಕ ವರ್ಗೀಕರಣದ ಪರೀಕ್ಷಣೆ

ಮೇಲ್ಕಂಡ ಸಾಹಿತ್ಯದ ಪರಿಶೀಲನೆಯ ಆಧಾರದ ಮೇಲೆ ಸಾಂಸ್ಥಿಕ ಸ್ವರೂಪಗಳಿಗೆ ಒಂದು ಕಾರ್ಯಾತ್ಮಕ ವರ್ಗೀಕರಣವನ್ನು ಅಭಿವೃದ್ಧಿಪಡಿಸಲಾಯಿತು. ಇದನ್ನು AVPNನ ಸಾರ್ವಜನಿಕವಾಗಿ ಲಭ್ಯವಿರುವ ಸದಸ್ಯ ಸಂಸ್ಥೆಗಳ ಪಟ್ಟಿಯನ್ನು ಬಳಸಿ ಪರಿಶೀಲಿಸಲಾಯಿತು. ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದ 87 ಸಂಸ್ಥೆಗಳ ಉಪ- ನಮೂನೆಯನ್ನು ಆಯ್ಕೆಮಾಡಲಾಯಿತು. ಪ್ರತಿಯೊಂದು ಸಂಸ್ಥೆಯ ವೆಬ್‌ಸೈಟ್‌ಗಳ ಅಧ್ಯಯನವನ್ನು ನಡೆಸಿ, ಲೇಖನದಲ್ಲಿ ನೀಡಲಾದ ಪೂರ್ವ ನಿರ್ಧರಿತ ವ್ಯಾಖ್ಯಾನಗಳ (ಕೋಷ್ಟಕ 2.1) ಆಧಾರದ ಮೇಲೆ ಸಾಂಸ್ಥಿಕ ಸ್ವರೂಪವನ್ನು ವರ್ಗೀಕರಿಸಲಾಯಿತು.

ಆರಂಭದಲ್ಲಿ, ಇದನ್ನು ಸಂಸ್ಥೆಯ ಸ್ವಯಂ-ಗುರುತಿಸುವಿಕೆಯ ಆಧಾರದ ಮೇಲೆ ಮಾಡಲಾಯಿತು. ಕೆಲವು ಸಂದರ್ಭಗಳಲ್ಲಿ ಗುರುತಿಸುವಿಕೆಗಳು ಸ್ಪಷ್ಟವಾಗಿದ್ದವು, ಇತರ ಸಂದರ್ಭಗಳಲ್ಲಿ ಸಂಸ್ಥೆಯ ಗುರಿ ಮತ್ತು ಸ್ಥಾನಮಾನವನ್ನು ಪೂರ್ವ ನಿರ್ಧರಿತ ವ್ಯಾಖ್ಯಾನಗಳೊಂದಿಗೆ ಹೊಂದಿಸುವ ಮೂಲಕ ಅವುಗಳನ್ನು ನಿರ್ಧರಿಸಲಾಯಿತು. ಸಂಸ್ಥೆಯ ದೃಷ್ಟಿಕೋನ, ಗುರಿ, ಕಾರ್ಯ ಕ್ಷೇತ್ರ, ಕಾನೂನುಬದ್ಧ ಸ್ಥಾನಮಾನ ಮತ್ತು ಆರ್ಥಿಕ ಮಾಹಿತಿಗಳನ್ನು ಕುರಿತ ಮತ್ತಷ್ಟು ದತ್ತಾಂಶಗಳನ್ನು ಸಂಗ್ರಹಿಸಿ (ಅದು ದೊರೆಯುವಲ್ಲಿ) ಇದನ್ನು ನಿರ್ವಹಿಸಲಾಯಿತು. ಸಂಪೂರ್ಣ ನಮೂನೆ ಹಾಗೂ ಅಧ್ಯಯನದಾದ್ಯಂತ, ಈ ಪ್ರಕ್ರಿಯೆಯು ಸಂಸ್ಥೆಗಳು ತಮ್ಮ ಕಾರ್ಯಾಚರಣೆಗಳನ್ನು ಸಾರ್ವಜನಿಕವಾಗಿ ವರದಿ ಮಾಡುವಾಗ ನೀಡಿದ ವಿವರಗಳ ಮಟ್ಟ ಮತ್ತು ದಸ್ತಾವೇಜೀಕರಣವನ್ನು ಬಹಳಮಟ್ಟಿಗೆ ಅವಲಂಬಿತವಾಗಿತ್ತು. ಈ ಕಾರ್ಯದ ಆರಂಭದಲ್ಲಿಯೇ, ಪೂರ್ವ-ನಿರ್ಧರಿತ ವ್ಯಾಖ್ಯಾನಗಳು ಅಪೂರ್ಣವೆಂಬುದು ಸ್ಪಷ್ಟವಾಯಿತು. ಭಾಗಶಃ, ಸ್ಪಷ್ಟ ಮತ್ತು ಪಾರದರ್ಶಕ ಸಾಂಸ್ಥಿಕ ಮಟ್ಟದ ದತ್ತಾಂಶ ಕೊರತೆಯಿಂದ, ಮತ್ತೊಂದೆಡೆ ವಿಭಿನ್ನ ಕಾರ್ಯನಿರ್ವಾಹಕರ ಸಮೂಹವು ಅಸ್ತಿತ್ವದಲ್ಲಿದ್ದ ವರ್ಗಗಳಲ್ಲಿ ಸರಿಯಾಗಿ ಹೊಂದಿಕೆಯಾಗದ ಕಾರಣದಿಂದ ಕಷ್ಟಗಳು ಉಂಟಾದವು.

ದತ್ತ ಸಂಚಯದ ಸಂಪೂರ್ಣ ನಮೂನೆಯನ್ನು ಸಂಕಲಿತಗೊಳಿಸಿದಾಗ, ಸಂಸ್ಥೆಯ ಸ್ವರೂಪವನ್ನು ವರ್ಗೀಕರಿಸಲು ಮತ್ತು ಒಂದು ಕಾರ್ಯಾತ್ಮಕ ವರ್ಗೀಕರಣವನ್ನು ಅಭಿವೃದ್ಧಿಪಡಿಸಲು ವಿವೇಚನಾತ್ಮಕ ವರ್ಗೀಕರಣವನ್ನು ಬಳಸಲಾಯಿತು. ಸರಳವಾಗಿ ಹೇಳಬೇಕೆಂದರೆ, ಮೌಲ್ಯಾಂಕನಕರ್ತರು ಅಥವಾ ಅಧ್ಯಯನಕಾರರು ಮೂಲ ದತ್ತಾಂಶದಿಂದ ರೂಪಿಸಿದ ವ್ಯಾಖ್ಯಾನಗಳ ಮೂಲಕ ಮುಖ್ಯವಾಗಿ ಪರಿಕಲ್ಪನೆಗಳು, ವಿಷಯಗಳು ಅಥವಾ ನಮೂನೆಗಳನ್ನು ಸಂದರ್ಭಿತಗೊಳಿಸಲು ಪ್ರಮುಖವಾಗಿ ಮೂಲ ದತ್ತಾಂಶದ ವಿಸ್ತೃತ ಅಧ್ಯಯನದ ದತ್ತಾಂಶಗಳನ್ನು ಬಳಸುವ ವಿಧಾನಗಳನ್ನು ವಿವೇಚನಾತ್ಮಕ ವಿಶ್ಲೇಷಣೆಯೆನ್ನಲಾಗುತ್ತದೆ (ಥಾಮಸ್, 2006, ಪು. 238). ನಾವು ಅಗತ್ಯವಿರುವ ಮಾಹಿತಿಯನ್ನು ಮೇಲಿನಂತೆ ಸಂಸ್ಥೆಗಳ ವೆಬ್ಸೈಟ್ಗಳಿಂದ ಪಡೆದಿದ್ದೇವೆ. ಆದರೆ

ಅವುಗಳನ್ನು ಅಸ್ತಿತ್ವದಲ್ಲಿದ್ದ ವರ್ಗಗಳಲ್ಲಿ ಬಲವಂತವಾಗಿ ಹೊಂದಿಸುವ ಬದಲು, ಅವುಗಳ ನಡುವಿನ ಸಾಮ್ಯತೆಯನ್ನು ಹುಡುಕಿ, ಮಾಹಿತಿಗಳಿಂದಲೇ ಹೊಸ ಗುಂಪುಗಳನ್ನು ರೂಪಿಸಿದ್ದೇವೆ. ಇದರಲ್ಲಿ, ಸಂಸ್ಥೆಯ ಸ್ವಯಂ-ಗುರುತಿಸುವಿಕೆಯ ಮಾಹಿತಿ ಮತ್ತು ಪೂರ್ವ ನಿರ್ಧರಿತ ವ್ಯಾಖ್ಯಾನಗಳನ್ನು ಪುನರಾವರ್ತಿಸುತ್ತಾ, ಒಳಗೂಡಿಸುವಿಕೆಗಾಗಿ (inclusion) ಮಾನದಂಡ ಮತ್ತು ವಿವರಣಾತ್ಮಕ ವ್ಯಾಖ್ಯಾನಗಳನ್ನು ರೂಪಿಸುವುದು, ನಮೂನೆಯಲ್ಲಿರುವ ಕಾರ್ಯನಿರ್ವಾಹಕರ ಸ್ವರೂಪವನ್ನು ಉತ್ತಮವಾಗಿ ಪ್ರತಿಬಿಂಬಿಸಲು ಪೂರ್ವ ನಿರ್ಧರಿತ ವ್ಯಾಖ್ಯಾನಗಳ ಪರಿಷ್ಕರಣೆ ಮತ್ತು ಸಂಸ್ಕರಣೆಗಳು ಸೇರಿವೆ. ಫಲಿತಾಂಶವನ್ನು ಕೋಷ್ಟಕ 2.2ರಲ್ಲಿ ಪ್ರಸ್ತುತಪಡಿಸಲಾಗಿದೆ. ಸಂಕರತೆಯು ಸ್ವಾಭಾವಿಕವಾಗಿ ಗತಿಶೀಲವಾಗಿದ್ದು, ಕಾರ್ಯಶೀಲ ವರ್ಗೀಕರಣದಲ್ಲಿ ನಾವು ಪರಿಣಾಮಿ ಪರಿಭಾಷೆಗಳ ಸ್ಥಿರ ದೃಷ್ಟಿಕೋನವನ್ನು ಹೊಂದುವುದಿಲ್ಲ. ದತ್ತಸಂಚಯದ ವಿಶ್ಲೇಷಣೆಯು ವಿಕಸಿತಗೊಳ್ಳುತ್ತಿದ್ದಂತೆ, ಅದರ ಮತ್ತಷ್ಟು ಸುಧಾರಣೆಯನ್ನು ನಾವು ನಿರೀಕ್ಷಿಸುತ್ತೇವೆ.

ಕೋಷ್ಟಕ 2.2. ಸಂಬದ್ಧ ರಾಜ್ಯೇತರ ಖಾಸಗಿ ಕಾರ್ಯನಿರ್ವಾಹಕರ ವರ್ಗೀಕರಣದ ಮಾನದಂಡ ಮತ್ತು ವಿವೇಚನಾತ್ಮಕವಾಗಿ ವ್ಯುತ್ಪನ್ನಗೊಂಡ/ಪಡೆದ ವಿವರಣೆಗಳು

ಸಾಂಸ್ಥಿಕ ಸ್ವರೂಪ	ವರ್ಗೀಕರಣದ ಮಾನದಂಡ ಮತ್ತು ವಿವೇಚನಾತ್ಮಕ ವಿವರಣೆಗಳು	ದತ್ತಸಂಚಯದಿಂದ ಪಡೆದ ಉದಾಹರಣೆಗಳು
ದಾನ/ಸರ್ಕಾರೇತರ ಸಂಸ್ಥೆಗಳು	ಲಾಭದ ಉದ್ದೇಶವಿಲ್ಲದ ಸಂಸ್ಥೆಗಳು; ಇವು ಸಾರ್ವಜನಿಕ ಕ್ಷೇತ್ರದ ಭಾಗವಲ್ಲ, ಆದರೆ ಸಾರ್ವಜನಿಕ ಕ್ಷೇತ್ರದ ನಿಧಿಗಳನ್ನು ಪಡೆಯಬಹುದು; ಸ್ವತಂತ್ರ ಟ್ರಸ್ಟಿಗಳ ಮಂಡಳಿ ಅಥವಾ ಸಿಇಒ ಅವರ ನೇತೃತ್ವದಲ್ಲಿರುತ್ತವೆ; ತಮ್ಮ ಕಾರ್ಯಗಳನ್ನು ನಡೆಸಲು ಮುಖ್ಯವಾಗಿ ಬಾಹ್ಯ ನಿಧಿಗಳ ಮೇಲೆ ಅವಲಂಬಿತವಾಗಿರುತ್ತವೆ (ಖಾಸಗಿ ಪ್ರತಿಷ್ಠಾನ ಗಳಿಗಿಂತ ಭಿನ್ನವಾಗಿ).	ಆಕ್ಷನ್ ಏಡ್ ಇಂಟರ್ ನ್ಯಾಷನಲ್, ಎಜುಕೇಟ್ ಗರ್ಲ್ಸ್, ಫ್ರೆಂಡ್ ಹಲ್ಲೋಸ್ ಪ್ರತಿಷ್ಠಾನ, ಲಿಟ್ಲ್ ಹೀರೋಸ್, ಡ್ರೀಮ್ಸ್ ಪ್ರಥಮ್ ಪ್ರತಿಷ್ಠಾನ.
ಕಾರ್ಪರೇಟ್ ಸಾಮಾಜಿಕ ಜವಾಬ್ದಾರಿ (ಸಿ ಎಸ್ ಆರ್) ಉಪಕ್ರಮ/ಘಟಕ	ಖಾಸಗಿ ನಿಗಮದ ಕಾರ್ಪರೇಟ್ ಪ್ರತಿಷ್ಠಾನವಾಗಿ ಸ್ಥಾಪಿತವಾಗದ ಸಾಮಾಜಿಕ ಹೊಣೆಗಾರಿಕೆಯ ಕಾರ್ಯಕ್ರಮ/ವಿಭಾಗ ಅಥವಾ ಘಟಕ., ಇವು ತಮ್ಮದೇ ಆರ್ಥಿಕ ಸಂಪನ್ಮೂಲಗಳನ್ನು ಬಳಸುತ್ತವೆ. ಸ್ವಂತ ನಿಧಿಗಳನ್ನು ಕೊಡುಗೆಯಾಗಿ ನೀಡುತ್ತವೆ ಮತ್ತು/ಅಥವಾ ನೌಕರರನ್ನು ಸ್ವಯಂ ಸೇವಕರಾಗಿ ತೊಡಗಿಸುತ್ತವೆ. ಕೆಲವೊಮ್ಮೆ ಇವು ಕಾನೂನಬದ್ಧವಾಗಿ ಕಡ್ಡಾಯವಾಗಿರಬಹುದು (ಉದಾ: ಭಾರತ).	ಕಂಪೆನಿಗಳ ಸಿ ಎಸ್ ಆರ್ ಕಾರ್ಯಕ್ರಮಗಳು/ ಘಟಕಗಳು: ಭಾರತ್ ಪೆಟ್ರೋಲಿಯಂ ಕಾರ್ಪೋರೇಷನ್ ಲಿಮಿಟೆಡ್, ಕೋಕಾಕೋಲ, ಕ್ರೆಡಿಟ್ ಸುಯಿಸ್, ಮಹೀಂದ್ರಾ ಗ್ರೂಪ್, ಸಿಂಗ್ಟೆಲ್, ಯುಬಿಎಸ್
ಪರಿಣಾಮಕಾರಿ ಹೂಡಿಕೆದಾರರು	**ಆದರ್ಶ ಮಾದರಿ ಜಿಐಐಎನ್** (GIIN **ದಿನಾಂಕವಿಲ್ಲ**) • ಉದ್ದೇಶ: ಜನಹಿತಕ್ಕಾಗಿ ಸಾಮಾಜಿಕ ಅಥವಾ ಪರಿಸರ ಸಂಬಂಧಿತ ಸಮಸ್ಯೆಗಳನ್ನು ಪರಿಹರಿಸುವ ಗುರಿ. • ಹೂಡಿಕೆಗಳಿಂದ ವಿವಿಧ ಮಟ್ಟಗಳಲ್ಲಿ ಲಾಭದ ನಿರೀಕ್ಷೆ - (ಕನಿಷ್ಠ ಮಟ್ಟದಲ್ಲಿ ಹೂಡಿಕೆಯ ಹಣವನ್ನಾದರೂ ಹಿಂದಿರುಗಿಸಿಕೊಳ್ಳುವುದು.) • ವಿಭಿನ್ನ ಆರ್ಥಿಕ ಸಾಧನಗಳನ್ನು ಬಳಸುವುದು (ಅಥವಾ ವಿಭಿನ್ನ 'ಆಸ್ತಿ ವರ್ಗಗಳಲ್ಲಿ ಹೂಡಿಕೆ	ಆಕ್ಸನ್, ಅಕ್ಯೂಮೆನ್, ಗ್ರೇ ಮ್ಯಾಟರ್ಸ್ ಕ್ಯಾಪಿಟಲ್, ಓಮಿಡ್ಯರ್ ನೆಟ್ವರ್ಕ್ ಸರ್ವಿಸಸ್

	ಮಾಡುವುದು.) • ಪ್ರಭಾವವನ್ನು ಮಾಪನಮಾಡುವ ಬದ್ಧತೆ. ಹೆಚ್ಚುವರಿ ಮಾನದಂಡ: ಸಂಸ್ಥೆಗಳಾಗಿರಬೇಕು, ತಮ್ಮದೇ ಆರ್ಥಿಕ ಸಂಪನ್ಮೂಲಗಳನ್ನು ಬಳಸಬೇಕು (ದಳ್ಳಾಳಿ ಅಲ್ಲ); ಲಾಭರಹಿತ ದೃಷ್ಟಿಕೋನ ಹೊಂದಿರಬಹುದು; ನಿಷ್ಕ್ರಮಣಯೋಜನೆ ಹೊಂದಿರಬೇಕು (ಇಚ್ಛಿತ ಅಥವಾ ವಾಸ್ತವಿಕ); ಸಾರ್ವಜನಿಕ ಕ್ಷೇತ್ರದ ಜನರನ್ನು ಹೊರತುಪಡಿಸಿರಬೇಕು.	
ಸಂಪರ್ಕ ಸೇವಾ ಸಂಸ್ಥೆ/ವೇದಿಕೆ	ಸಂಸ್ಥೆಗಳು ಸದಸ್ಯತ್ವ ಆಧಾರಿತವಾಗಿರಬಹುದು, ಸಂಘಗಳು ಅಥವಾ ಸಾರ್ವಜನಿಕ ಸಭಾಸ್ಥಾನ/ಚರ್ಚಾಸ್ಥಳ; ದಾನಿಗಳು ಅಥವಾ ಹೂಡಿಕೆದಾರರನ್ನು ಉದ್ದೇಶ ಅಥವಾ ಸಂಭಾವ್ಯ ಹೂಡಿಕೆದಾರರೊಂದಿಗೆ ಸಂಪರ್ಕಿಸುವ ವೇದಿಕೆಗಳು (ಸಾರ್ವಜನಿಕ ನಿಧಿ ಸಂಗ್ರಹಣೆ ವೇದಿಕೆಗಳನ್ನು ಒಳಗೊಂಡಿರಬಹುದು); ಸಂಪರ್ಕ ಜಾಲದ ಸ್ಥಳಗಳು (ಭೌತಿಕ ಮತ್ತು/ಅಥವಾ ಆನ್ಲೈನ್ ಸ್ಥಳಗಳನ್ನು ಒಳಗೊಂಡಂತೆ). ಇವು ವಿವಿಧ ಬೆಂಬಲ ಸೇವೆಗಳನ್ನು ನೀಡಬಹುದು (ಉದಾ: ತಾಂತ್ರಿಕ ಬೆಂಬಲ, ಜ್ಞಾನ ಪರಿಣತಿ, ಪೋರ್ಟ್‌ಫೋಲಿಯೋ ಬೆಂಬಲ ಇತ್ಯಾದಿ) ಮತ್ತು/ಅಥವಾ ಕಾರ್ಯನಿರ್ವಾಹಕರನ್ನು ಸಂಪರ್ಕಿಸುವ ವೇದಿಕೆಗಳಾಗಿರಬಹುದು. ಇವು ಲಾಭ-ಆಧಾರಿತ, ಹೈಬ್ರಿಡ್ ಅಥವಾ ಲಾಭರಹಿತವಾಗಿರಬಹುದು.	ಗ್ಲೋಬಲ್ಗಿವಿಂಗ್, ಇಂಡಿಯನ್ ಏಂಜಲ್ ನೆಟ್ವರ್ಕ್, ಶೇರಿಂಗ್ ವ್ಯಾಲ್ಯೂ ಏಷ್ಯಾ, ವಿಭಾ ಟ್ರಸ್ಟ್.
ಖಾಸಗಿ ಪ್ರತಿಷ್ಠಾನ	**ಆದರ್ಶ ಮಾದರಿ** (ಮಾರ್ಟಿನ್ ಮತ್ತು ವಿಟ್ಟ್, 2008) • ಲಾಭ ರಹಿತ ದೃಷ್ಟಿಕೋನ • ಸಾರ್ವಜನಿಕ ಕ್ಷೇತ್ರದ ಭಾಗವಾಗಿರುವುದಿಲ್ಲ. • ಸ್ವಂತ ಆರ್ಥಿಕ ಸಂಪನ್ಮೂಲಗಳ ಬಳಕೆ, ಸಾಮಾನ್ಯವಾಗಿ ದತ್ತಿಯಿಂದ	ಅಜ಼ೀಮ್ ಪ್ರೇಮ್‌ಜಿ ಫೌಂಡೇಷನ್, ಬಿಲ್ ಅಂಡ್ ಮೆಲಿಂಡಾ ಗೇಟ್ಸ್ ಫೌಂಡೇಷನ್ಸ್, ಡಿ ಬಿ ಎಸ್ ಫೌಂಡೇಷನ್, ಡಾ. ರೆಡ್ಡೀಸ್ ಫೌಂಡೇಷನ್,

	• ಸ್ವತಂತ್ರ ಟ್ರಸ್ಟಿಗಳ ಮಂಡಳಿ ಅಥವಾ ಸಿಇಓ ಅವರ ನೇತೃತ್ವದಲ್ಲಿ ಕಾರ್ಯ ನಿರ್ವಹಣೆ • ಜನಹಿತಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ನಿರ್ವಹಿಸುವ ಉದ್ದೇಶ. • ಅನುದಾನವನ್ನು ನೀಡುತ್ತವೆ ಅಥವಾ ಪರಿಚಾಲನಾತ್ಮಕವಾಗಿರುತ್ತವೆ (ಸ್ವಂತವಾಗಿ ಅಥವಾ ಇತರರೊಂದಿಗಿನ ಸಹಕಾರದಲ್ಲಿ ಕಾರ್ಯಕ್ರಮಗಳನ್ನು ನಿರ್ವಹಿಸುತ್ತವೆ) ಇವುಗಳು ಸ್ವತಂತ್ರ ಖಾಸಗಿ ಪ್ರತಿಷ್ಠಾನಗಳು (ಕುಟುಂಬ ಮತ್ತು ವ್ಯಕ್ತಿಗತ), ಕಾರ್ಪರೆಟ್ ಪ್ರತಿಷ್ಠಾನಗಳು ಮತ್ತು ಸಮುದಾಯ ಪ್ರತಿಷ್ಠಾನಗಳನ್ನು ಒಳಗೊಂಡಿರುತ್ತವೆ (ಮುಖ್ಯವಾಗಿ ಸಾರ್ವಜನಿಕ ಬೆಂಬಲಿತವಲ್ಲ).	ಎಡೆಲ್‌ಗಿವ್ ಫೌಂಡೇಷನ್, ಮೈಕೆಲ್ ಅಂಡ್ ಸುಸಾನ್ ಡೆಲ್ ಫೌಂಡೇಷನ್, ಟೆಕ್ ಮಹೀಂದ್ರಾ ಫೌಂಡೇಷನ್, ಜೆಶಾನ್ ಫೌಂಡೇಷನ್ ಹೈಬ್ರಿಡ್ ಫೌಂಡೇಷನ್*: ನಿಪ್ಪಾನ್ ಫೌಂಡೇಷನ್
ಸಾಮಾಜಿಕ ಹೂಡಿಕೆ ಸಂಸ್ಥೆ/ನಿಧಿ ನಿರ್ವಹಣಾಧಿಕಾರಿ/ನಿಧಿ ಸಲಹೆಗಾರ ಅಥವಾ ಹೂಡಿಕೆ ಸಲಹಾ ಸೇವೆ	ಇವು ತಮ್ಮದೇ ನಿಧಿಗಳನ್ನು ಬಳಸಿಕೊಂಡು ನೇರ ಹೂಡಿಕೆ ಮಾಡಬಹುದು; ಗ್ರಾಹಕರಿಗಾಗಿ ಹೂಡಿಕೆ ನಿಧಿಗಳನ್ನು ನಿರ್ವಹಿಸಬಹುದು. ಬ್ರೋಕರೇಜ್ ಸಂಸ್ಥೆಗಳಂತೆ ಕಾರ್ಯನಿರ್ವಹಿಸಬಹುದು; ಹೂಡಿಕೆ ಸಲಹೆ ಅಥವಾ ಸಮಾಲೋಚನೆ ನೀಡಬಹುದು. ಹೂಡಿಕೆಯ ಮೇಲೆ ನಿರೀಕ್ಷಿತ ಲಾಭದ ವಿವಿಧ ದರಗಳನ್ನು ಒಳಗೊಂಡಿರಬಹುದು, ಮತ್ತು ವಿಭಿನ್ನ ಆರ್ಥಿಕ ಸಾಧನಗಳನ್ನು ಬಳಸಬಹುದು. ಸಾಮಾಜಿಕ ಹೂಡಿಕೆ ಸಂಸ್ಥೆಗಳು, ನಿರ್ವಾಹಕರು ಅಥವಾ ಸಲಹೆಗಾರರ ಗ್ರಾಹಕರು ಸಾಮಾನ್ಯವಾಗಿ ಪರೋಪಕಾರಿ ಸಂಸ್ಥೆಗಳು, ಸಾಮಾಜಿಕ ಉದ್ಯಮಿಗಳು ಅಥವಾ ಸಾಮಾಜಿಕ ಉದ್ದೇಶ ಹೊಂದಿರುವ ಸಂಯುಕ್ತ ಹೈಬ್ರಿಡ್) ಸಂಸ್ಥೆಗಳಾಗಿರುತ್ತಾರೆ. ಇವು ಲಾಭ-ಉನ್ಮುಖ ಸಂಕರಿತ ಅಥವಾ ಲಾಭರಹಿತವಾಗಿರಬಹುದು.	ಏಷ್ಯಾ ವ್ಯಾಲ್ಯೂ ಅಡ್ವೈಸರ್ಸ್, ಕ್ಯಾಲ್ ವರ್ಟ್ ಇಂಪ್ಯಾಕ್ಟ್ ಕ್ಯಾಪಿಟಲ್, ವೈಸ್ ಫಿಲಾಂಥ್ರಪಿಕ್ ಅಡ್ವೈಸರ್ಸ್.
ಇತರೆ	ಇದರಲ್ಲಿ ವಿವಿಧ ರೀತಿಯ ಕಾರ್ಯನಿರ್ವಾಹಕರು ಸೇರಿರುತ್ತಾರೆ. ಉದಾ: ಸಲಹೆಗಾರಿಕಾ ಸಂಸ್ಥೆಗಳು,	ಅಯಲಲಾ, ಬಾಸ್ಟನ್ ಕನ್ಸಲ್ಟಿಂಗ್ ಗ್ರೂಪ್,

	ಬಹುರಾಷ್ಟ್ರೀಯ ನಿಗಮಗಳು ಮತ್ತು ಸ್ಥಳೀಯ ಕಾರ್ಪರೆಟ್ ಸಂಸ್ಥೆಗಳು, ಚಿಂತನಾ ಸಂಸ್ಥೆಗಳು, ಶಿಕ್ಷಣ-ಉನ್ಮುಖ ಸಂಸ್ಥೆಗಳು (ಉದಾ: ಸಂಶೋಧನಾ ಕೇಂದ್ರಗಳು, ಮಾಧ್ಯಮಿಕ ಹಂತದ ನಂತರದ ಶಾಲೆಗಳು), ಪೋಷಕಗಳು (Incubators), ಲಾಭೋದ್ದೇಶಿತ, ಸಂಕರಿತ ಅಥವಾ ಲಾಭರಹಿತ.	ಚಿಲಸ, ಎಫ್ ಎಚ್ ಐ 360, ಇಂಡಿಯನ್ ಸ್ಕೂಲ್ ಆಫ್ ಡೆವೆಲಪ್ ಮೆಂಟ್ ಮ್ಯಾನೇಜ್ ಮೆಂಟ್

ಟಿಪ್ಪಣಿಗಳು: ರಾಜ್ಯ/ಸರ್ಕಾರಿ ಮತ್ತು ಬಹುಪಕ್ಷೀಯ ಸಂಸ್ಥೆಗಳನ್ನು ಹೊರತುಪಡಿಸಲಾಗಿದೆ. ಇವು ದತ್ತಸಂಚಯದಲ್ಲಿ ಕಂಡುಬಂದಾಗ್ಯೂ, ಇಲ್ಲಿನ ಚರ್ಚೆಗೆ ಪ್ರಾಸಂಗಿಕವಲ್ಲ.

* ಸಂಕರಿತ ಪ್ರತಿಷ್ಠಾನ ಎಂದರೆ, ಸಾರ್ವಜನಿಕ ಮತ್ತು ಖಾಸಗಿ ವಿತ್ತಪೋಷಣ(funding) ಮೂಲಗಳು ಮಿಶ್ರಿತವಾಗಿರುವ ಪ್ರತಿಷ್ಠಾನ. ಆದರೆ ಇದು ಸಾರ್ವಜನಿಕ ಕ್ಷೇತ್ರದ ಭಾಗವಲ್ಲ.

ಖಾಸಗಿ ವಲಯದ ಸಂಕರತೆಯ ಸುಲಲಿತಗೊಳಿಸುವಿಕೆ? ಸಾಹಿತ್ಯದಲ್ಲಿ, ಸಂಸ್ಥೆಗಳ ಸ್ವರೂಪದ ಗುರುತಿಸುವಿಕೆ.

ಕೋಷ್ಟಕ 2.1ರಲ್ಲಿ ಪರೋಪಕಾರಿ ಮತ್ತು ಸಂಕರ ಸಾಂಸ್ಥಿಕ ಸ್ವರೂಪಗಳ ಆಯ್ದ ಪೂರ್ವನಿರ್ಧರಿತ ವ್ಯಾಖ್ಯಾನಗಳನ್ನು ಪ್ರಸ್ತುತಪಡಿಸಲಾಗಿದ್ದು, ಅವು ಪದೇ ಪದೇ ಸಾಹಿತ್ಯದ ಸಮೀಕ್ಷೆಗಳಲ್ಲಿ ಕಾಣಿಸಿಕೊಂಡಿವರ (ಮೇಲಿನ ವಿಶ್ಲೇಷಣೆ 1 ಮತ್ತು ವಿಶ್ಲೇಷಣೆ 2), ಈವರೆಗೆ ವಿವರಿಸಲಾದ ಸಂಕೀರ್ಣತೆಗಳು ಮತ್ತು ಕೆಳಗಿನ ವಿಶ್ಲೇಷಣೆಯನ್ನು ಗಮನದಲ್ಲಿಟ್ಟುಕೊಂಡು ಇಲ್ಲಿ ಸೂಚಿಸಲಾದ ವ್ಯಾಖ್ಯಾನಗಳು ಪ್ರಾಮಾಣಿಕ, ಸಂಪೂರ್ಣ ಅಥವಾ ವಿವಾದದಿಂದ ಮುಕ್ತವೆಂದು ಹೇಳಲಾಗುವುದಿಲ್ಲ. ಮೊದಲ ಘಟ್ಟದಲ್ಲಿ, ಈ ವ್ಯಾಖ್ಯಾನಗಳನ್ನು ಈ ಅಧ್ಯಯನಕ್ಕಾಗಿ ಸಂಸ್ಥೆಗಳನ್ನು ಕಾರ್ಯಾನ್ವಿತಗೊಳಿಸುವ ಮಾರ್ಗದರ್ಶನಕ್ಕಾಗಿ ಆಯ್ಕೆಮಾಡಲಾಗಿತ್ತು; ನಂತರ, ಮಾದರಿ ಸಂಸ್ಥೆಗಳಿಂದ ಮಾಹಿತಿಯನ್ನು ಪಡೆದು, ವಿವೇಚನಾತ್ಮಕವಾಗಿ ಪರಿಭಾಷಿತಗೊಳಿಸಲಾಗಿದೆ.

ಕೋಷ್ಟಕ 2.1ನ್ನು ಗಮನಿಸಿದರೆ, ಸಾಂಸ್ಥಿಕ ಸ್ವರೂಪಗಳನ್ನು ವಿವರಿಸುವುದು ಕಷ್ಟಸಾಧ್ಯ ಮತ್ತು ಸಮಸ್ಯಾತ್ಮಕವೆಂದು ಸ್ಪಷ್ಟವಾಗುತ್ತದೆ. ಮೊದಲನೆಯದಾಗಿ, ವಿವಿಧ ಸಾಂಸ್ಥಿಕ ಸ್ವರೂಪಗಳು, ಅನೇಕ ಮೂಲಗಳು ಮತ್ತು ಹಲವಾರು ವ್ಯಾಖ್ಯಾನಗಳಿದ್ದು ಕೆಲವು ಸಂದರ್ಭಗಳಲ್ಲಿ ಒಂದೇ

ಸ್ವರೂಪಕ್ಕೆ ವಿವಿಧ ವ್ಯಾಖ್ಯಾನಗಳು ಲಭ್ಯವಾಗುತ್ತವೆ. ವ್ಯಾಖ್ಯಾನಗಳಲ್ಲಿ ಸ್ವಲ್ಪಮಟ್ಟಿನ ಕೆಲವು ವ್ಯತ್ಯಾಸಗಳಿವೆ. ಆದರೆ ಕೆಲವು ಸಾಕಷ್ಟು ಮಹತ್ವಪೂರ್ಣದ್ದಾಗಿವೆ. ಹಲವು ವಿಶಿಷ್ಟ ಸಂದರ್ಭಗಳಲ್ಲಿ ಕಾನೂನು ಸಂಬಂಧಿತ ಭೇದಗಳಿರಬಹುದು. ಈ ವ್ಯತ್ಯಾಸಗಳು, ನಿರ್ದಿಷ್ಟ ನಿಯಂತ್ರಕ ಅಥವಾ ಪ್ರಕ್ರಿಯಾತ್ಮಕ ಸಂದರ್ಭಗಳಿಲ್ಲದಾಗ, ಸಾಂಸ್ಥಿಕ ಸ್ವರೂಪಕ್ಕೆ ಅತ್ಯಂತ ಸೂಕ್ತವಾದ ಮಾನಕ ಪರಿಭಾಷೆಯ ಗ್ರಹಿಕೆಯನ್ನು ಅಸಾಧ್ಯಗೊಳಿಸಬಹುದು. ಈ ರೀತಿಯ ಸಮಸ್ಯೆಗಳು 'ಪರೋಪಕಾರಿ ಪ್ರತಿಷ್ಠಾನ'ಗಳ ವಿಷಯದಲ್ಲಿ ಸ್ಪಷ್ಟವಾಗಿ ಕಾಣಿಸುತ್ತವೆ.

ಎರಡನೆಯದಾಗಿ, ಕೆಲವು ಪದಗಳನ್ನು ಕಾರ್ಯನೀತಿಗಳು ಮತ್ತು ಸಾಂಸ್ಥಿಕ ಸ್ವರೂಪಗಳೆಂದು ಸಾಮಾನ್ಯವಾಗಿ ಉಲ್ಲೇಖಿಸಲಾಗುತ್ತದೆ ಅಥವಾ ಗ್ರಹಿಸಲಾಗುತ್ತದೆ. ಉದಾಹರಣೆಗೆ, ತಂತ್ರಾತ್ಮಕ ಅಥವಾ ಉದ್ಯಮ ಪರೋಪಕಾರ. ಇದು ಹೈಬ್ರಿಡ್ ಸಂಸ್ಥಾಪನೆಯ ಸಂಘಟನಾತ್ಮಕ ಅಸ್ಮಿತೆ, ಸಂಘಟನಾತ್ಮಕ ಸ್ವರೂಪಗಳುಮತ್ತು ಸಂಸ್ಥಾಗತ ತರ್ಕಗಳನ್ನು ಅಸ್ಪಷ್ಟಗೊಳಿಸುತ್ತದೆ (ಬಟ್ಟಿಲಾನ ಮತ್ತು ಲೀ, 2014). ಮೂರನೆಯದಾಗಿ, ಒಂದು ವ್ಯಾಖ್ಯಾನದ ಮೂಲಕ ಸೂಚಿಸಲಾದ ಕೆಲವು ಲಕ್ಷಣಗಳು, ಆ ರೀತಿಯಲ್ಲಿ ಕಾರ್ಯ ನಿರ್ವಹಿಸುವ ಎಲ್ಲಾ ಸಂಸ್ಥೆಗಳಿಗೂ ಸರಿಯಾಗಿ ಹೊಂದಿಕೊಳ್ಳದೇ ಇರಬಹುದು ಉದಾಹರಣೆಗೆ, ಒಂದು ವ್ಯಾಖ್ಯಾನದಲ್ಲಿ ಪರಿಣಾಮಕಾರಿ ಹೂಡಿಕೆ ನಿಧಿಗಳ ಲಕ್ಷಣ ಹೀಗಿತ್ತು: ಸಾಮಾಜಿಕ ಪರಿಣಾಮಕಾರಿ ನಿಧಿಗಳನ್ನು ಹೂಡಿಕೆದಾರರು ತಾವೇ ನಿರ್ವಹಿಸುವುದಿಲ್ಲ, ಬದಲಾಗಿ ಲಾಭವನ್ನು ಅರಸುವ ಸಂಸ್ಥೆಗಳ ಮೂಲಕ ನಿರ್ವಹಿಸಲಾಗುತ್ತದೆ (ಚಿಯಾ, 2015 ಪು. 10). ಆದರೆ ಪರಿಣಾಮಕಾರಿ ಹೂಡಿಕೆದಾರರು (Impact Investors) ಎಂದು ಗುರುತಿಸಿಕೊಂಡಿರುವ ಕೆಲವು ಸಂಸ್ಥೆಗಳು ತಾವೇ ಸಾಮಾಜಿಕ ಪರಿಣಾಕಾರಿ ನಿಧಿಗಳನ್ನು ನಿರ್ವಹಿಸುವ ಉದಾಹರಣೆಗಳಿವೆ, ಮತ್ತು ಅವುಗಳಲ್ಲಿ ಕೆಲವು ಲಾಭಾಂಶವನ್ನು ಅರಸುವುದಿಲ್ಲ. ನಾಲ್ಕನೆಯದಾಗಿ, ಸಾಮಾನ್ಯವಾಗಿ, ಕೆಲವು ವೇಳೆ ಅವುಗಳನ್ನು ಹೆಚ್ಚಾಗಿ ವ್ಯಕ್ತಿಗಳೆಂದು ಪರಿಗಣಿಸಬಹುದು (ಉದಾಹರಣೆಗೆ, ಏಂಜಲ್ ಹೂಡಿಕೆದಾರರು), ಅಥವಾ ಅವು ಇತರ ಸಂಘಟನಾತ್ಮಕ ನಿಕಾಯಗಳ ಮೂಲಕ (ಉದಾ: ಜಾಲತಾಣ ಸೇವಾ ಸಂಸ್ಥೆಗಳು) ಅನೌಪಚಾರಿಕವಾಗಿ ಅಥವಾ ಗುಂಪುಗಳಾಗಿ ಕಾರ್ಯ ನಿರ್ವಹಿಸಬಹುದು.

ಕೊನೆಯದಾಗಿ, ಸಾಹಿತ್ಯದಲ್ಲಿ ಕಾರ್ಯನಿರ್ವಾಹಕರನ್ನು ಲಾಭಾಸಕ್ತಿಯ ಆಧಾರದ ಮೇಲೆ ವರ್ಗೀಕರಿಸುವ ಪ್ರಯತ್ನ ಮಾಡಲಾಗಿದೆ. ಸಾಮಾನ್ಯವಾಗಿ ಮೂರು ರೀತಿಯ ವರ್ಗೀಕರಣವನ್ನು ನಾವು ಕಾಣಬಹುದು. ಮೊದಲನೆಯದು, ಲಾಭೋದ್ದೇಶಿತರು (ಅಥವಾ ಲಾಭದಿಂದ ಪ್ರೇರಿತರಾದವರು); ಎರಡನೆಯದು, ಲಾಭರಹಿತದವರು (not-for-profit); (ಅಥವಾ ಇವರು ಸಂಪೂರ್ಣವಾಗಿ ಸಾಮಾಜಿಕ ಪರಿಣಾಮದಿಂದ ಪ್ರೇರಿತರಾಗಿರುತ್ತಾರೆ); ಮೂರನೆಯದು, ಸಂಕರ ಅಥವಾ ಮಿಶ್ರಿತ (ಹೈಬ್ರಿಡ್/ಬ್ಲೆಂಡೆಡ್). ಅಂದರೆ, ಲಾಭ ಮತ್ತು ಸಾಮಾಜಿಕ ಪ್ರಭಾವ – ಈ ಎರಡರಿಂದಲೂ ಪ್ರೇರಿತರಾದವರು (OECD ಡೆವೆಲಪ್ಮೆಂಟ್ ಸೆಂಟರ್, 2014; ಸ್ಟೀರ್ ಮತ್ತು ಇತರರು,

2015; ಥೋರ್ನ್‌ಲಿ ಮತ್ತು ಇತರರು, 2016). ಪಾರಂಪರಿಕವಾಗಿ ಲಾಭೋದ್ದೇಶಿತ ಮತ್ತು ಲಾಭರಹಿತ ಕಾರ್ಯನಿರ್ವಾಹಕರ ಪರಿಭಾಷೆಯು ಷೇರನ್ನು ಹೊಂದಿದವರು ಅಥವಾ ಮಾಲೀಕರು ಸಂಚಾಲನೆಯಲ್ಲಿ, ಲಾಭವನ್ನು ಡಿವಿಡೆಂಡ್ ರೂಪದಲ್ಲಿ ತೆಗೆದುಕೊಳ್ಳುತ್ತಾರೆಯೇ ಅಥವಾ ಲಾಭವನ್ನು ಮರು ಹೂಡಿಕೆ ಮಾಡುವರೇ ಎಂಬುವುದನ್ನು ಖಚಿತಪಡಿಸಿಕೊಳ್ಳುವುದನ್ನು ಒಳಗೊಂಡಿದೆ (ಯಾವ ಮಟ್ಟದಲ್ಲಿ ಅಥವಾ ಯಾವ ಉದ್ದೇಶಕ್ಕೆ). ಈ ಅಂತರವು ತುಲನಾತ್ಮಕವಾಗಿ ಸರಳವಾಗಿ ಕಂಡರೂ, ವಾಸ್ತವದಲ್ಲಿ ಆಗಾಗ್ಗೆ ಅದನ್ನು ಖಚಿತಪಡಿಸಿಕೊಳ್ಳುವುದು ಕಷ್ಟದ ಕೆಲಸ. ಪರೋಪಕಾರಿ ಅಥವಾ ಇತರೆ ಧರ್ಮಾರ್ಥ ಸಂಸ್ಥೆಗಳ ಸಂದರ್ಭದಲ್ಲಿಯೂ ಇದು ಕಂಡುಬರುತ್ತದೆ (ಎ ಯು ಮತ್ತು ಲುಬಿನ್ಸ್ಕಿ, 2016; ಓಲ್ಮೆಡೋ, 2016).

ಓಲ್ಮೆಡೋ (2016) ಇಂಗ್ಲೆಂಡ್‌ನಲ್ಲಿರುವ ಒಂದು ಸಂಸ್ಥೆಯ ಉದಾಹರಣೆಯನ್ನು ನೀಡುತ್ತಾರೆ. ಅದು 'ಪರೋಪಕಾರಿ ಮತ್ತು ಖಾತರಿಯ ನಿಟ್ಟಿನ ಸೀಮಿತ ಕಂಪನಿಯಾಗಿಯೂ (company limited by guarantee) ನೋಂದಾಯಿತವಾಗಿರಬಹುದು. ಇಂತಹ ಸಂಸ್ಥೆಯನ್ನು ಸಾಮಾನ್ಯವಾಗಿ "ಧರ್ಮಾರ್ಥ ಸಂಸ್ಥೆ" ಎಂದು ಕರೆಯಲಾಗುತ್ತದೆಯಲ್ಲದೆ, ಅದು ಆಸ್ತಿಯನ್ನು ಹೊಂದಿರಬಹುದು ಮತ್ತು ಲಾಭವನ್ನೂ ಗಳಿಸಬಹುದು. ಆದರೆ ಆ ಲಾಭವನ್ನು ಸಂಸ್ಥೆಯಲ್ಲಿಯೇ ಮೂರುಹೂಡಿಕೆ ಮಾಡಬೇಕು. ಆದರೆ ಮರು ಹೂಡಿಕೆಯ ಉದ್ದೇಶಗಳನ್ನು ಸ್ಪಷ್ಟವಾಗಿ ವಿಶದೀಕರಿಸಿರುವುದಿಲ್ಲವೆಂದು ಓಲ್ಮೆಡೋ ತಿಳಿಸುತ್ತಾರೆ. ಆದ್ದರಿಂದ, ಮರುಹೂಡಿಕೆಯ ಲಾಭವನ್ನು ನಿಧಿ ಒದಗಿಸಲು ಅಥವಾ ಉಪಕ್ರಮಗಳನ್ನು ಜಾರಿಗೆ ತರುವ ಉದ್ದೇಶಗಳಿಗೆ ಮರುಹೂಡಿಕೆ ಮಾಡುವ ಬದಲಾಗಿ, ಅವರ ಆರ್ಥಿಕ ಸಂಪತ್ತನ್ನು ವ್ಯಾಪಾರ ಮಾಡಲು ಮತ್ತು ವಸ್ತು/ಸೇವೆಗಳನ್ನು ಖರೀದಿಸಲು ಬಳಸುವ ಪರ್ಯಾಯ ಸಾಧ್ಯತೆಗಳನ್ನು ಇದು ಹೊರತುಪಡಿಸುವುದಿಲ್ಲ (ಓಲ್ಮೆಡೋ, 2016, ಪುಟ 48).

ಈ ಯೋಜನೆಯಲ್ಲಿನ ದತ್ತಾಂಶ ಸಂಗ್ರಹಣಾ ಪ್ರಕ್ರಿಯೆಯಲ್ಲಿ ಹೂಡಿಕೆಗಳಿಂದ ನಿರೀಕ್ಷಿತ ಲಾಭವನ್ನು ಮರು ಹೂಡಿಕೆ ಮಾಡುವ ವಿಧಾನಗಳು, ಮೊತ್ತಗಳು ಮತ್ತು ತಂತ್ರಗಳ ಬಗ್ಗೆ ನೀಡಲ್ಪಟ್ಟ ವರದಿಗಳು ಸ್ಪಷ್ಟವಾಗಿರಲಿಲ್ಲ. ಅಧಿಕೃತವಾಗಿ 'ಲಾಭರಹಿತ' (ಉದಾ., ಅಮೇರಿಕಾದಲ್ಲಿ 502(c) ಸ್ಥಾನಮಾನಕ್ಕೆ ಸಮಾನವಾದ) ಎಂದು ವರ್ಗೀಕರಿಸಲ್ಪಟ್ಟಿರುವ ಕಾರ್ಯನಿರ್ವಾಹಕರ ಬಗ್ಗೆ ಮತ್ತು ಇದರ ಜೊತೆಗೇ ಹಣಕಾಸು ಲಾಭವನ್ನು ಹುಡುಕುವ ಕಾರ್ಯತಂತ್ರಗಳನ್ನು (ಉದಾ: ಪ್ರಭಾವಿ/ಪರಿಣಾಮಕಾರಿ ಹೂಡಿಕೆ) ಬಳಸುವ ಸಾಧ್ಯತೆ ಇರುವವರ ಬಗ್ಗೆ ಇದನ್ನು ಸ್ಪಷ್ಟಪಡಿಸಿಕೊಳ್ಳುವುದು ಬಹಳ ಮುಖ್ಯ. ಅದೇ ರೀತಿ ಸಂಕರಿತ (hybrid) ಅಥವಾ ಮಿಶ್ರಿತ ಸಂಸ್ಥೆಗಳಿಗೆ ಸಾಮಾಜಿಕ ಪ್ರಭಾವದ ಜೊತೆಗೇ, ಹೂಡಿಕೆಗಳ ನಿಟ್ಟಿನ ಆರ್ಥಿಕ ಪ್ರತಿಫಲದ ಅನುಮಾನಿತ ನಿರಂತರತೆಯಿದೆ (ಅಂದರೆ, 5%,10%,15-20%ಕ್ಕಿಂತ ಹೆಚ್ಚಿನ, ಮುಂತಾಗಿ). ಆದರೆ, ಆರ್ಥಿಕ ಲಾಭದ ಗರಿಷ್ಠ ಮಿತಿಯ ಬಗ್ಗೆ, ಅಂದರೆ ಯಾವ ಮಟ್ಟದ ಲಾಭವನ್ನು ಮೀರಿದರೆ

ಹೂಡಿಕೆಗಳನ್ನು/ಕಾರ್ಯನಿರ್ವಾಹಕರನ್ನು'ಲಾಭೋದ್ದೇಶಿತ'ಎಂದು ಪರಿಗಣಿಸಬೇಕು ಮತ್ತು ಸಂಕರಿತವೆಂದು ಪರಿಗಣಿಸಬಾರದು ಎಂಬ ವಿಷಯದಲ್ಲಿ ಏಕಮತವಿಲ್ಲ.

ಪರ್ಯಾಯ ವರ್ಗೀಕರಣ: ವಿವೇಚನಾತ್ಮಕ ಕಾರ್ಯಾತ್ಮಕ ವರ್ಗೀಕರಣದೆಡೆಗೆ

ಪೂರ್ವ ನಿರ್ಧರಿತ ವ್ಯಾಖ್ಯಾನಗಳನ್ನು ಮಾದರಿ ಸಂಸ್ಥೆಗಳಿಗೆ ಅನ್ವಯಿಸುವುದು ಕಷ್ಟವಾಯಿತು. ಮೊದಲನೆಯದಾಗಿ, ಮಾದರಿ ಸಂಸ್ಥೆಗಳ ಒಟ್ಟು ಪ್ರಮಾಣವು ವಿಶ್ಲೇಷಣೆಯಲ್ಲಿ ಅನಾವೃತಗೊಂಡ ಸಂಸ್ಥೆಗಳೊಂದಿಗೆ ಹೊಂದಿಕೆಯಾಗಲಿಲ್ಲ. ಕೆಲವು ಸಂದರ್ಭಗಳಲ್ಲಿ, ಅವು ಇತರ ಸ್ವರೂಪಗಳನ್ನು (ಉದಾಹರಣೆಗೆ: ಧರ್ಮಾರ್ಥ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳು [ಎನ್ ಜಿ ಒ ಗಳು], ಸಾಮಾಜಿಕ ಹೂಡಿಕೆ ನಿಧಿಗಳು/ನಿರ್ವಾಹಕರು/ಸಲಹಾ ಸೇವೆಗಳು) ಒಳಗೊಂಡಿದ್ದು, ಇವುಗಳಿಗೆ ಸ್ಪಷ್ಟೀಕರಣದ ಅಗತ್ಯವಿತ್ತು. ಇತರೆ ಸಂದರ್ಭಗಳಲ್ಲಿ, ಪ್ರತ್ಯೇಕ ವರ್ಗೀಕರಣ ನೀಡಲು ತಕ್ಕಷ್ಟು ಸಂಸ್ಥೆಗಳು ಇರಲಿಲ್ಲ. (ಉದಾ: ವೇಗವರ್ಧಕ ಸಂಸ್ಥೆಗಳು ಮತ್ತು ಪೋಷಕ ಸಂಸ್ಥೆಗಳು) ಎರಡನೆಯದಾಗಿ, ಅನೇಕ ಸಂದರ್ಭಗಳಲ್ಲಿ, ಸಾರ್ವಜನಿಕವಾಗಿ ಲಭ್ಯವಿರುವ ಸಾಂಸ್ಥಿಕ ದತ್ತಾಂಶದಲ್ಲಿ ಪೂರ್ವ ನಿರ್ಧರಿತ ವ್ಯಾಖ್ಯಾನಗಳಿಗೆ ಹೊಂದಿಸಲು ಅಗತ್ಯವಿರುವ ಸಾಂಸ್ಥಿಕ ಕಾರ್ಯಗಳ ಕುರಿತು ಪರ್ಯಾಪ್ತ ವಿವರಗಳು ಲಭ್ಯವಿರಲಿಲ್ಲ. ಇಂತಹ ಸಂದರ್ಭಗಳಲ್ಲಿ, ಬಾಹ್ಯ ಮಾನದಂಡಗಳನ್ನು ಬಳಸಿ ಸಾಂಸ್ಥಿಕ ಸ್ವರೂಪಗಳನ್ನು ಗುರುತಿಸುವುದು ಕಷ್ಟಕರವಾದುದು. ಮೂರನೆಯದಾಗಿ, ಒಂದೇ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಸಂಸ್ಥೆಗಳು ತಮ್ಮನ್ನು ಒಂದೇ ರೀತಿಯಲ್ಲಿ ಗುರುತಿಸಿಕೊಳ್ಳುವ ಅನಿವಾರ್ಯತೆಯಿರಲಿಲ್ಲ. ಉದಾಹರಣೆಗೆ: ಒಂದು ಸಂಸ್ಥೆ ತನ್ನನ್ನು ಪ್ರಾರಂಭಿಕ ಹೂಡಿಕೆದಾರ (seed funder) ಎಂದು ಪರಿಗಣಿಸಬಹುದು, ಆದರೆ ಅದೇ ರೀತಿಯಾಗಿ ಕಾರ್ಯ ನಿರ್ವಹಿಸುತ್ತಿರುವ (ಮತ್ತು ಪ್ರಾರಂಭಿಕ ಹೂಡಿಕೆಯನ್ನು ಒದಗಿಸುವ) ಇನ್ನೊಂದು ಸಂಸ್ಥೆಯು ತನ್ನನ್ನು ಪರಿಣಾಮಕಾರಿ ಹೂಡಿಕೆದಾರ (impact Investor) ಎಂದು ಗುರುತಿಸಿಕೊಳ್ಳಬಹುದು. ಇಂತಹ ಸಂದರ್ಭಗಳಲ್ಲಿ, ನಾವು ಸಂಸ್ಥೆಗಳ ಸ್ವಯಂ-ವಿವರಣೆಯನ್ನು ಇನ್ನಷ್ಟು ನಿಕಟವಾಗಿ ಪರಿಶೀಲಿಸಿ, ಪೂರ್ವ ನಿರ್ಧರಿತ ವ್ಯಾಖ್ಯಾನಗಳನ್ನು ಅಳವಡಿಸಿ ಅವುಗಳನ್ನು ಇನ್ನಷ್ಟು ವ್ಯಾಪಕವಾಗಿ ಅನ್ವಯಿಸುವಂತೆ ಮಾಡಬೇಕಾಯಿತು. ಕೊನೆಗೆ, ಸಂಸ್ಥೆಗಳ ರೂಪಗಳು ಮತ್ತು ಹೂಡಿಕೆ ತಂತ್ರಗಳ ನಡುವಿನ ಗಡಿಗಳು ಅಸ್ಪಷ್ಟವಾಗಿರಬಹುದು. ಹಾಗೂ ಸಂಸ್ಥೆಗಳೇ ಅವನ್ನು ಅಸಮರ್ಪಕವಾಗಿ ಅನ್ವಯಿಸಿರಬಹುದು. ಉದಾಹರಣೆಗೆ, ನಿಗಮವೊಂದರ ಸಿ ಎಸ್ ಆರ್ (ಸಾಮಾಜಿಕ ಹೊಣೆಗಾರಿಕೆ) ಉಪಕ್ರಮವನ್ನು ನೇರವಾಗಿ ಜಾರಿಗೊಳಿಸಬಹುದು, ಕಂಪೆನಿಯ ಆಂತರಿಕ ಘಟಕವಾಗಿ ಸ್ಥಾಪಿಸಲ್ಪಟ್ಟಿದ್ದರೂ, ಅಥವಾ ಮೂಲ ನಿಗಮದೊಂದಿಗೆ ಸಂಪರ್ಕಿಸಲ್ಪಟ್ಟಿದ್ದಾಗ್ಯೂ ಅದು ಕಾರ್ಪರೇಟ್ ಪ್ರತಿಷ್ಠಾನದ ರೂಪವನ್ನು ಪಡೆದುಕೊಳ್ಳಬಹುದು. ಜೊತೆಗೆ ಹೆಚ್ಚಿನ ಸ್ಥಿರೀಕೃತ ದತ್ತಾಂಶವಿಲ್ಲದಿರಬಹುದು. ಇಂತಹ ಸಂದರ್ಭಗಳಲ್ಲಿ, ಸ್ಥಿರ/ನಿಶ್ಚಿತ ವ್ಯಾಖ್ಯಾನವನ್ನು ಅನ್ವಯಿಸುವುದು ಅಸಾಧ್ಯವಾಗುತ್ತದೆ. ಸಂಸ್ಥೆಗಳ ವರ್ಗೀಕರಣದ ನಮ್ಮ ಆರಂಭಿಕ ಪ್ರಯತ್ನಗಳ ಈ ಉದಾಹರಣೆಗಳು, ಪೂರ್ವ ನಿರ್ಧರಿತ

ವ್ಯಾಖ್ಯಾನಗಳ ಆಧಾರದ ಮೇಲೆ ಸಂಸ್ಥೆಗಳನ್ನು ವರ್ಗೀಕರಿಸುವುದು ಉಪಯುಕ್ತವೇ ಅಥವಾ ಸಾಧ್ಯವೇ ಎಂಬುದನ್ನು ಮರುಪರಿಶೀಲಿಸಲು ನಮ್ಮನ್ನು ಪ್ರೇರೇಪಿಸಿತು.

ಇದರ ಪರಿಣಾಮವಾಗಿ, ನಾವು ಒಂದು ಕಾರ್ಯಶೀಲ ವರ್ಗೀಕರಣವನ್ನು (ದತ್ತಾಂಶದಲ್ಲಿನ ಉದಾಹರಣೆಯೊಂದಿಗೆ ಕೋಷ್ಟಕ 2.2ಅನ್ನು ನೋಡಿ) ರೂಪಿಸಿದೆವು. ಈ ಅಧ್ಯಯನದ ಗಮನವನ್ನು ಕೇಂದ್ರೀಕರಿಸಿದ ವಿಷಯದ ನಿಟ್ಟಿನಲ್ಲಿ ಖಾಸಗಿ ಪ್ರತಿಷ್ಠಾನಗಳು ಮತ್ತು ಪರಿಣಾಮಕಾರಿ ಹೂಡಿಕೆದಾರರು ಅತ್ಯಂತ ಪ್ರಸ್ತುತ ಸ್ವರೂಪಗಳಾಗಿದ್ದವು. ಇದಲ್ಲದೆ, ಕೆಳಗಿನವುಗಳು ಸಹ ಮಾದರಿಯಲ್ಲಿ ಅತ್ಯಂತ ಪ್ರಚಲಿತವೆಂದು ತಿಳಿದುಬಂದಿದೆ: [ಧರ್ಮಾರ್ಥ ಸಂಸ್ಥೆ/ಎನ್ ಜಿ ಒ, ಸಿ ಎಸ್ ಆರ್ ಉಪಕ್ರಮ/ಘಟಕ, ಜಾಲತಾಣ ಸೇವಾ ಸಂಸ್ಥೆ ಅಥವಾ ವೇದಿಕೆ, ಸಾಮಾಜಿಕ ಹೂಡಿಕೆ ಸಂಸ್ಥೆ/ನಿಧಿ ನಿರ್ವಾಹಕರು/ನಿಧಿ ಸಲಹೆಗಾರರು ಅಥವಾ ಹೂಡಿಕೆ ಸಲಹಾ ಸೇವೆ ಮತ್ತು ಇತರೆ, (ವಿವಿಧ ಪಾತ್ರ ನಿರ್ವಾಹಕರನ್ನು ಒಳಗೊಂಡಂತೆ)].

ಸಾಧ್ಯವಾದಷ್ಟು ಮಟ್ಟಿಗೆ, ನಾವು ವಿಭಿನ್ನ ನಿಯಾಮಕ ಸಂದರ್ಭಗಳಾದ್ಯಂತ ಅನ್ವಯಿಸಬಹುದಾದ ಸಂಘಟನಾತ್ಮಕ ಮಟ್ಟದ ದತ್ತಾಂಶದಿಂದ ಹೊರಹೊಮ್ಮುವ ಸಂಬಂಧಿತ ಮಾನದಂಡಗಳನ್ನು ವಿವೇಚನಾತ್ಮಕವಾಗಿವಾಗಿ ಪಡೆದುಕೊಳ್ಳಲು ಪ್ರಯತ್ನಿಸಿದ್ದೇವೆ. ನಿರ್ದಿಷ್ಟ ಸ್ಥಳೀಯ ಸಂದರ್ಭದಲ್ಲಿ ಕೇವಲ ಒಂದು ವರ್ಗದ ಸಂಘಟನೆಗಳಿಗೆ ಅನ್ವಯಿಸುವ ಆಡಳಿತಾತ್ಮಕ ನಿಬಂಧನೆಗಳ ಮೇಲೆ ಅವಲಂಬಿಸದೆ ಪೂರ್ವ ನಿರ್ಧರಿತ ವ್ಯಾಖ್ಯಾನಗಳೊಂದಿಗೆ ಸ್ವಯಂ-ಗುರುತಿಸುವಿಕೆಯ ಸಂಘಟನಾ ದತ್ತಾಂಶವನ್ನು ಹಂತಹಂತವಾಗಿ ಹೋಲಿಸುವ ಮೂಲಕ ನಾವು ಸಂಘಟನಾ ಸ್ವರೂಪಗಳ ಲಕ್ಷಣಗಳನ್ನು ಗ್ರಹಿಸಿದ್ದೇವೆ. ಸಂಕರತೆಯ ಕೇಂದ್ರೀಯತೆಯ ಕಾರಣದಿಂದಾಗಿ ಇದು ಅಗತ್ಯವಾಗಿತ್ತು, ಅಂತೆಯೇ, ಕಾರ್ಯನಿರ್ವಾಹಕರನ್ನು ವರ್ಗೀಕರಿಸಿ, ಈ ಬಹುರಾಷ್ಟ್ರೀಯ ಅಧ್ಯಯನಕ್ಕಾಗಿ ಅವರನ್ನು ಒಟ್ಟುಗೂಡಿಸಿ ಹೋಲಿಕೆ ಮಾಡಲು ಸಹ ಇದರ ಅವಶ್ಯಕತೆಯಿತ್ತು. ಉದಾಹರಣೆಗೆ ಏಶಿಯಾದ ಕೆಲವು ದೇಶಗಳಲ್ಲಿ, ಖಾಸಗಿ ಪ್ರತಿಷ್ಠಾನ ಎಂಬುದಕ್ಕೆ ಔಪಚಾರಿಕ ಭೇದವಿಲ್ಲ (ಉದಾಹರಣೆಗೆ: ಭಾರತ, ವಿಯೆಟ್ನಾಂ). ಆದರೆ ಇತರ ಕೆಲವು ದೇಶಗಳಲ್ಲಿ (ಉದಾಹರಣೆಗೆ: ಚೀನಾ, ಇಂಡೋನೇಷ್ಯಾ, ಜಪಾನ್)[6] ಇದೆ. ಆದ್ದರಿಂದ ಸಂಬಂಧಿತ ಸಾಂಸ್ಥಿಕ ಲಕ್ಷಣಗಳನ್ನು ಗುರುತಿಸಿ ಇರುವ ವ್ಯಾಖ್ಯಾನಗಳಿಗೆ ಹೊಂದಿಸುವುದು ತುಲನಾತ್ಮಕ ವಿಶ್ಲೇಷಣೆಗೆ ಹೆಚ್ಚು ಉಪಯುಕ್ತವಾಯಿತು.

ಕಾರ್ಯಾತ್ಮಕ ವರ್ಗೀಕರಣವು, ವರ್ಗೀಕರಣದ ಒಂದು ಮಟ್ಟವನ್ನು ಸಾಧಿಸಲು ಉಪಯುಕ್ತವಾಯಿತು. ಇದಿಲ್ಲದೆ ಮಾದರಿಯನ್ನು ವಿಶ್ಲೇಷಿಸಲು ಸಾಧ್ಯವಾಗುತ್ತಿರಲಿಲ್ಲ. ಆದರೆ ಇದು

[6] ಚೀನಾ, ಭಾರತ, ಇಂಡೋನೇಷ್ಯಾ, ಜಪಾನ್ ಮತ್ತು ವಿಯೆಟ್ನಾಂ ದೇಶಗಳಿಗೆ ಸಂಬಂಧಿಸಿದ ಕೌನ್ಸಿಲ್ ಆನ್ ಫೌಂಡೇಷನ್‌ನ ಕಂಟ್ರಿ ನೋಟ್ಸ್ ಅನ್ನು ಆಧರಿಸಿದೆ. https://www.cof.org/program-initiative/country-notesನಿಂದ 10 September 2018ರಂದು ಪಡೆಯಲಾಗಿದೆ.

ಅವ್ಯವಸ್ಥಿತವಾಗಿತ್ತು. ಅನೇಕ ಉದಾಹರಣೆಗಳು ಈ ಅಧ್ಯಯನ ಕ್ಷೇತ್ರದಲ್ಲಿನ ಪ್ರಚಲಿತ ಸಂಸ್ಥಾಗತ ತರ್ಕಗಳ ಸಂಕರತೆಯನ್ನು ತೋರಿಸುತ್ತವೆ ಮತ್ತು ಅನುಭವಿಸಿದ ಕಷ್ಟದ ಪರಿಸ್ಥಿತಿಗೆ ಕಾರಣವಾಗಿದೆ. ಇಂತಹ ಸಂದರ್ಭಗಳಲ್ಲಿ, ನಾವು ಮುಂದುವರಿಯಲಿಕ್ಕಾಗಿ ಅಧ್ಯಯನದ ಮುಖ್ಯ ಉದ್ದೇಶಗಳೆಡೆಗೆ ಗಮನವನ್ನು ಕೇಂದ್ರೀಕರಿಸಿದೆವು.

ಉದಾಹರಣೆಗೆ, ಯೋಜನೆಯ ಕೇಂದ್ರೀಕೃತ ವಿಷಯವು ಖಾಸಗಿ ಕ್ಷೇತ್ರವಾಗಿದ್ದರಿಂದ ಸಾರ್ವಜನಿಕ - ಕ್ಷೇತ್ರದ ಕಾರ್ಯನಿರ್ವಾಹಕರನ್ನು ಕಾರ್ಯಾತ್ಮಕ ವರ್ಗೀಕರಣದಿಂದ ಉದ್ದೇಶಪೂರ್ವಕವಾಗಿ ಹೊರತುಪಡಿಸಲಾಯಿತು. ಸಾರ್ವಜನಿಕ ಕ್ಷೇತ್ರದ ಕಾರ್ಯನಿರ್ವಾಹಕರನ್ನು (ಅವರ ಸಾರ್ವಜನಿಕ ಸ್ಥಾನಮಾನವನ್ನು ಹೊರತುಪಡಿಸಿ) ವಿವೇಚನಾತ್ಮಕವಾಗಿ ರೂಪುಗೊಂಡ ವರ್ಗೀಕರಣಗಳಿಗೆ ಸೇರಿಸಲಾಗುವುದಿಲ್ಲ, ಅಥವಾ ಅವರು ರಾಜ್ಯೇತರ ಖಾಸಗಿ ಕಾರ್ಯನಿರ್ವಾಹಕರಂತೆಯೇ ಕೆಲವು ಹಣಕಾಸು ಕಾರ್ಯತಂತ್ರಗಳನ್ನು ಬಳಸುವುದಿಲ್ಲ ಎಂಬುದು ನಮ್ಮ ತಾತ್ಪರ್ಯವಲ್ಲ. ಮೇಲೆ ಉಲ್ಲೇಖಿಸಿದ ಡಿ ಎಫ್ ಐ ಡಿ(DFID)ನಂತಹ ಸರ್ಕಾರಿ ಸಂಸ್ಥೆಗಳು, ಕೋಷ್ಟಕ 2.2ರಲ್ಲಿ ನೀಡಿರುವ ನಾಲ್ಕು ಮುಖ್ಯ ಮಾನದಂಡಗಳನ್ನು (ಅಂದರೆ, ಉದ್ದೇಶ, ಉದ್ದೇಶಿತ ಹೂಡಿಕೆಗಳ ಮೇಲೆ ಲಾಭದ ನಿರೀಕ್ಷೆ, ವಿವಿಧ ಆರ್ಥಿಕ ಸಾಧನಗಳ ಬಳಕೆ, ಪ್ರಭಾವವನ್ನು ಅಳೆಯುವ ಬದ್ಧತೆ) ಪೂರೈಸಿದರೆ, ಪ್ರಭಾವಿ/ಪರಿಣಾಮಕಾರಿ ಹೂಡಿಕೆಗಳೆಂದು ಪರಿಗಣಿಸಲಾಗುತ್ತದೆ. ಸಾರ್ವಜನಿಕ ಹಣಕಾಸಿನಿಂದ ನಡೆಯುವ ದಾನ ಸಂಸ್ಥೆಗಳು ಮತ್ತು ಪ್ರತಿಷ್ಠಾನಗಳೂ ಇವೆ. ಆದರೆ ಈ ಅಧ್ಯಯನವು ಕೇಂದ್ರೀಕರಿಸಿದ ವಿಷಯವನ್ನು ಗಮನದಲ್ಲಿಟ್ಟುಕೊಂಡು, ಅವುಗಳನ್ನು ಹೊರತುಪಡಿಸಲಾಗಿದೆ.

ಇದರಲ್ಲಿ ಖಾಸಗಿ ಪ್ರತಿಷ್ಠಾನಗಳೂ ಇವೆ. ಅವುಗಳು ಒಟ್ಟಿಗೆ ಪರಿಣಾಮಕಾರಿ ಹೂಡಿಕೆಗಳ ನಾಲ್ಕು ಮುಖ್ಯ ಮಾನದಂಡಗಳನ್ನು (ಉದಾ: MSDF) ಪೂರೈಸುತ್ತವೆ. ಖಾಸಗಿ ಸಂಸ್ಥೆಗಳ ಸಂಘಟನಾತ್ಮಕ ರೂಪುರೇಷೆಗಳು ಖಾಸಗಿ ಪ್ರತಿಷ್ಠಾನಗಳ ಪ್ರಮುಖ ಮಾನದಂಡಗಳನ್ನು ಪೂರೈಸಿದರೆ ನಿರ್ದಿಷ್ಟವಾಗಿ, ಅನುದಾನ ವಿತರಣೆಯೇ ಅವರ ಮುಖ್ಯ ಹಣಕಾಸಿನ ವಿಧಾನವಾಗಿದ್ದರೆ, ಇಂತಹ ಸಂದರ್ಭಗಳಲ್ಲಿ, 'ಖಾಸಗಿ ಪ್ರತಿಷ್ಠಾನ'ಗಳು ಎಂಬ ವರ್ಗೀಕರಣಕ್ಕೆ ಆದ್ಯತೆ ನೀಡಲಾಯಿತು. ಕೊನೆಯದಾಗಿ, ಮೊದಲೇ ಹೇಳಿದಂತೆ, 'ಖಾಸಗಿ ಪ್ರತಿಷ್ಠಾನ' ಎಂಬ ಪದನಾಮಕ್ಕೆ ನಿಯಮಾಧಾರಿತ ಅಂತರ ಎಲ್ಲಾ ದೇಶಗಳಲ್ಲಿಯೂ ಇರುವುದಿಲ್ಲ. ಆದ್ದರಿಂದ, ಕೆಲವು ಖಾಸಗಿ ವಲಯದ ಸಂಸ್ಥೆಗಳು ತಮ್ಮನ್ನು'ಪ್ರತಿಷ್ಠಾನ' ಎಂದು ಕರೆದುಕೊಳ್ಳುತ್ತಿದ್ದರೂ, ಅವು ಬಹುಪಾಲು ಇತರ ಅನುದಾನ ನೀಡುವ ದಾತರಿಂದ ಹಣವನ್ನು ಸ್ವೀಕರಿಸುವ ಮೂಲಕ ಕಾರ್ಯ ನಿರ್ವಹಿಸುತ್ತಿದ್ದವು (ಉದಾ: ಫ್ರೆಡ್ ಹಾಲೋಸ್ ಫೌಂಡೇಷನ್, ಪ್ರಥಮ್). ಇಂತಹ ಸಂದರ್ಭಗಳಲ್ಲಿ, ಅವರ ಮುಖ್ಯ ಹಣಕಾಸು ಮೂಲ ಮತ್ತು ನಿರ್ವಹಣಾ ರಚನೆಗೆ ಆದ್ಯತೆ ನೀಡಲಾಗುತ್ತದೆ.

ಅಂತಿಮ ಟಿಪ್ಪಣಿಗಳು ಮತ್ತು ಮುಂದಿನ ದಾರಿಗಳು?

ಈ ಅಧ್ಯಾಯವು ಸಂಕರಿತವಾಗಿ(hybrid) ಆಯೋಜಿತಗೊಂಡಿರುವ ರಾಜ್ಯೇತರ ಖಾಸಗಿ ಕಾರ್ಯನಿರ್ವಾಹಕರನ್ನು ಕಾರ್ಯಾನ್ವಿತಗೊಳಿಸಬೇಕಾದ ಅವಶ್ಯಕತೆಯಿಂದ ರೂಪುಗೊಂಡಿದ್ದು, ಏಷ್ಯಾದಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಸಗಿ ಪ್ರತಿಷ್ಠಾನಗಳು ಮತ್ತು ಪರಿಣಾಮಕಾರಿ ಹೂಡಿಕೆದಾರರ ಲಕ್ಷಿತ (target) ಭೌಗೋಳಿಕ ಪ್ರದೇಶಗಳು, ಶಿಕ್ಷಣ ಕ್ಷೇತ್ರದ ಪ್ರಾಥಮಿಕತೆಗಳು, ಹಾಗೂ ಉಪಕ್ರಮಗಳ ರೂಪುರೇಷೆಗಳನ್ನು ತಯಾರು ಮಾಡುವ ಅಧ್ಯಯನಕ್ಕಾಗಿ ದತ್ತಾಂಶವನ್ನು ಸಂಗ್ರಹಿಸುವ ಪ್ರಾಯೋಗಿಕ ಉದ್ದೇಶಗಳನ್ನು ಒಳಗೊಂಡಿದೆ. ವಿಶ್ಲೇಷಣೆಯನ್ನು ಸರಳಗೊಳಿಸಲು ವೈಶಿಷ್ಟ್ಯ ಪೂರ್ವಕ ಪೂರ್ವ ನಿರ್ಧರಿತ ವರ್ಗೀಕರಣವನ್ನು ಅನ್ವಯಿಸುವ ಪ್ರೇರಣೆ ಇತ್ತು. ಆದರೂ, ಪ್ರಸ್ತುತದ ವಿಭಿನ್ನ ಪೂರ್ವನಿರ್ಧರಿತ ವ್ಯಾಖ್ಯಾನಗಳನ್ನು ಅನ್ವಯಿಸುವುದು ಪ್ರತಿಕೂಲವೆಂದು ಸಾಬೀತಾಯಿತು. ಸಾಹಿತ್ಯದಲ್ಲಿನ ಸ್ಪಷ್ಟತೆಯ ಕೊರತೆ ಮತ್ತು ಕಾರ್ಯನಿರ್ವಾಹಕರು ಮತ್ತು ಅವರ ಕಾರ್ಯಗಳ ಕುರಿತು ಸಾರ್ವಜನಿಕವಾಗಿ ವರದಿ ಮಾಡಲಾದ ಮಾಹಿತಿಯ ಕೊರತೆಯಿಂದಾಗಿ ಹಲವಾರು ಸಮಸ್ಯೆಗಳನ್ನೆದುರಿಸಬೇಕಾಯಿತು. ಜೊತೆಗೆ ನಮ್ಮ ಮಾದರಿಯಲ್ಲಿನ ಕಾರ್ಯನಿರ್ವಾಹಕರ ಅನೇಕ ಸಂಘಟನಾತ್ಮಕ ಸ್ವರೂಪಗಳು ಮತ್ತು ಕಾರ್ಯತಂತ್ರಗಳಿಗೆ ಸಂಬಂಧಿಸಿದಂತೆ ಸಂಕೀರ್ಣತೆಗಳೂ ಕಂಡುಬಂದವು. ಇದು ಸಂಕರತೆಯ ಅಂತರ್ನಿಹಿತ ಸ್ವರೂಪವಾಗಿದೆ.

ಸಂಕರಿತ ಸಂಯೋಜನೆಯು ಸಾಂಸ್ಥಿಕ ಗುರುತು, ರೂಪಗಳು ಮತ್ತು ತರ್ಕಗಳನ್ನು ಒಪ್ಪಿಕೊಳ್ಳಬೇಕೆಂಬ ಅನಿವಾರ್ಯತೆಯನ್ನು ನಿರ್ಮಾಣ ಮಾಡುತ್ತದೆ. ಆದರೂ ಸಂಕರತೆಯನ್ನು ಅಂಗೀಕರಿಸುವುದು ಸವಾಲುಗಳನ್ನು ಹುಟ್ಟುಹಾಕುತ್ತದೆ. ಸಂಘಟನಾ ಮಾಹಿತಿಗಳು ಅಸಮರ್ಪಕವಾಗಿದ್ದಾಗ ಅಥವಾ ಸಂಪೂರ್ಣವಾಗಿ ಪಾರದರ್ಶಕವಾಗಿಲ್ಲದಾಗ, ಹಾಗೂ ಅತ್ಯಂತ ವಿಭಿನ್ನ ನಿಯಾಮಕ ಸಂದರ್ಭಗಳಲ್ಲಿ ತುಲನಾತ್ಮಕ ಅಧ್ಯಯನ ನಡೆಸುವಾಗ ಈ ಸವಾಲುಗಳು ಮತ್ತಷ್ಟು ಹೆಚ್ಚಾಯಿತು.

ಹೀಗೆ ನಾವು ಕಠಿನ ಸಮಸ್ಯೆಯನ್ನು ಎದುರಿಸಿದೆವು. ಸಂಘಟನಾ ರೂಪಗಳ ವರ್ಗೀಕರಣವು ಅಧ್ಯಯನವನ್ನು ಮುಂದಕ್ಕೆ ಕೊಂಡೊಯ್ಯಲು ಅಗತ್ಯವಾಗಿದ್ದರೂ, ಪೂರ್ವ ನಿರ್ಧರಿತ ವ್ಯಾಖ್ಯಾನಗಳನ್ನು ಬಳಸುವುದು ಸಂಪೂರ್ಣ ಸೂಕ್ತವಲ್ಲವೆಂದು ತೋರುತ್ತಿತ್ತು. ಇದರಿಂದ ಈ ಅಧ್ಯಯನದ ಉದ್ದೇಶಗಳಿಗೆ ನಿರ್ದಿಷ್ಟವಾದ ವಿವೇಚನಾತ್ಮಕವಾಗಿ ರೂಪಿಸಿದ ಕಾರ್ಯಾತ್ಮಕಕ ವರ್ಗೀಕರಣವನ್ನು ರೂಪಿಸುವುದು ಅಗತ್ಯವಾಯಿತು. ಈ ಪ್ರಕ್ರಿಯೆಯು ಸಂಘಟನೆಯ ಸ್ವಯಂ ಗುರುತಿಸುವಿಕೆಯ ದತ್ತಾಂಶಕ್ಕೆ ಅನುರೂಪವಾಗಿ ಈಗಿನ ವ್ಯಾಖ್ಯಾನಗಳನ್ನು ಕ್ರಮಿಕವಾಗಿ ಪರಿಷ್ಕೃತಗೊಳಿಸುವ ಮೂಲಕ, ಹೆಚ್ಚು ಪ್ರಾಸಂಗಿಕ ಚೌಕಟ್ಟನ್ನು ಸ್ಥಾಪಿಸುವತ್ತ ಕೇಂದ್ರೀಕೃತವಾಯಿತು. ಸಂಕರತೆಯು ನಿರಂತರ ವಿಕಾಸವನ್ನು ಸೂಚಿಸುವುದರಿಂದ (OECD

ಡೆವೆಲಪ್ಮೆಂಟ್ ಸೆಂಟರ್, 2014), ಯಾವುದೇ ವರ್ಗೀಕರಣವು ಅಂತಿಮವಾಗಿ ಕಾರ್ಯಾತ್ಮಕ ವರ್ಗೀಕರಣವಾಗಿ ಕಾರ್ಯನಿರ್ವಹಿಸಬೇಕು ಮತ್ತು ಮತ್ತು ಈ ಕ್ಷೇತ್ರದ ವಿಕಸನದ ಜೊತೆ ಜೊತೆಗೆ ಹೊಸ ರೀತಿಯ ಕಾರ್ಯನಿರ್ವಾಹಕರು ಮತ್ತು ಹೊಸ ವ್ಯಾಖ್ಯಾನಗಳಿಗೆ ಮುಕ್ತವಾಗಿರಬೇಕು ಎಂಬುದು ನಮ್ಮ ನಿಲುವು. ವಿಶೇಷ ಅಧ್ಯಯನಗಳಲ್ಲಿ ವಿಶಿಷ್ಟ ಸಂಘಟನಾ ರೂಪಗಳನ್ನು ಹೇಗೆ ವ್ಯಾಖ್ಯಾನಿಸಲಾಗಿದೆ ಎಂಬುವುದನ್ನು ಸ್ಪಷ್ಟವಾಗಿ ವಿವರಿಸುವ ಲಕ್ಷಣಗಳ (ಪರಿಪೂರ್ಣ ಮಾದರಿಯಾಗಿ ಅವಲೋಕಿಸಲ್ಪಟ್ಟ) ಚೌಕಟ್ಟಿನಲ್ಲಿ ವಿವೇಚನಾತ್ಮಕವಾಗಿ ರೂಪಿಸಿದ ನಮ್ಮ ವಿಧಾನವನ್ನು ಅಳವಡಿಸಿಕೊಳ್ಳಬೇಕೆಂದು ಪ್ರತಿಪಾದಿಸುತ್ತೇವೆ. ಕೆಲವು ಸಂಘಟನೆಗಳಿಗೆ ಕೆಲವು ದೇಶೀಯ ಸಂದರ್ಭಗಳಲ್ಲಿ ನಿಯಂತ್ರಕ ಭಿನ್ನತೆಗಳಿರಬಹುದು, ಆದರೆ ಅವು ತುಲನಾತ್ಮಕ ಅಧ್ಯಯನಕ್ಕೆ ಅಸಮರ್ಪಕ ಅಥವಾ ಅಪರ್ಯಾಪ್ತವಾಗಿರಬಹುದು.

ಕೃತಜ್ಞತೆಗಳು

ಈ ಯೋಜನೆಗೆ ಹಣಕಾಸಿನ ಸಹಕಾರವು ಕೆನಡಾದ ಸಾಮಾಜಿಕ ವಿಜ್ಞಾನ ಮತ್ತು ಮಾನವಶಾಸ್ತ್ರ ಸಂಶೋಧನಾ ಸಂಸ್ಥೆಯಿಂದ ಅನುದಾನದ ಮೂಲಕ ಲಭ್ಯವಾಯಿತು (ಪ್ರಧಾನ ಸಂಶೋಧಕರು: ಶ್ರೀವಾಸ್ತವ), ಜೊತೆಗೆ ಬ್ರೂಕಿಂಗ್ಸ್ ಸಂಸ್ಥೆಯಿಂದ ಸಹ-ಅನುದಾನವು (co-funding) ದೊರಕಿದೆ. ಅಭಿಪ್ರಾಯಗಳು ಅನುದಾನಿಗಳ ದೃಷ್ಟಿಕೋನವನ್ನು ಪ್ರತಿಬಿಂಬಿಸುವುದಿಲ್ಲ. ಅಧ್ಯಯನವನ್ನು ಮತ್ತಷ್ಟು ನಿಖರಗೊಳಿಸಲು ಪ್ರೇರಣೆಯಾದ ಸಮೀಕ್ಷಕರ ಅಮೂಲ್ಯ ಟಿಪ್ಪಣಿಗಳಿಗೆ ನಾವು ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸುತ್ತೇವೆ.

ಪರಾಮರ್ಶನಗಳು:

Ackerman, X. (2015). Innovation and action in funding girls' education (Global Economy & Development Working Paper No. 84). Washington, DC: Brookings Institution. Retrieved November 26, 2018, from http://www.brookings.edu/re search/papers/2015/03/innovation-action-funding-girls-education-ackerman

Asian Development Bank. (2011). Impact investors in Asia: Characteristics and preferences for investing in social enterprise in Asia and the Pacific. Manila, Philippines: Author. Retrieved November 26, 2018, from https://www.adb.org/ sites/default/files/publication/29306/impact-investors.pdf Asian Venture Philanthropy Network. (2016). Annual report 2016. Singapore:

Asian Venture Philanthropy Network. Retrieved** November 26, 2018, from https://avpn.asia/wp-content/uploads/2016/09/annual-report-2016.pdf

Au, W., & Lubienski, C. (2016). The role of the Gates Foundation and the philan thropic sector in shaping the emerging education market: Lessons for the US on privatization of schools and education governance. In A. Verger, C. Lubienski, & G. Steiner-Khamsi (Eds.), World yearbook of education 2016: The global educa tion industry (pp. 27–43). Abingdon, UK: Routledge

Ball, S. J., & Olmedo, A. (2011). Global social capitalism: Using enterprise to solve the problems of the world. Citizenship, Social and Economics Education, 10(2), 83–90.

Battilana, J., & Lee, M. (2014). Advancing research on hybrid organizing: Insights from the study of social enterprises. The Academy of Management Annals, 8(1), 397–441. https://doi.org/10.1080/19416520.2014.893615

Bhanji, Z. (2008). Transnational corporations in education: Filling the governance gap through new social norms and market multilateralism?. Globalisation, Societies and Education, 6(1), 55–73.

Chia, A. (2015). Potential and prospects for philanthropy in implementing post-2015 development goals (ADB Sustainable Development Working Paper Series No. 38). Manila, Philippines: Asian Development Bank. Retrieved November 26, 2018, from https://www.adb.org/sites/default/files/publication/158689/sdwp-038. pdf

D. Capital Partners. (2013). Impact investing in education: An overview of the current landscape (Education Support Program Working Paper Series No. 59). New York, NY: Open Society Foundations. Retrieved November 26, 2018, from http://www. opensocietyfoundations.org/sites/default/files/impact-investing-education-overvi ew-current-landscape-20140106_0.pdf

Dacin, P. A., Dacin, M. T., & Matear, M. (2010). Social entrepreneurship: Why we don’t need a new theory and how we move forward from here. Academy of Management Perspectives, 24(3), 37–57. https://doi.org/10.5465/AMP.2010.52842950

Daggers, J., & Nicholls, A. (2016). The landscape of social impact investment research: Trends and opportunities. Oxford, UK: Saïd Business School, University of Oxford. Retrieved June 27, 2019, from http://eureka.sbs.ox.ac.uk/7019/1/Land scape-of-social-impact-investment-research.pdf

Fielden, J., & LaRocque, N. (2008). The evolving regulatory context for private education in emerging economies (Education Working Paper Series No. 14). Washington, DC: World Bank and International Finance Corporation. Retrieved June 27, 2019, from https://www.ifc.org/wps/wcm/connect/7db3ed804 970 b f f9 9a0 1da336b93d75f/Discussion%2BPaper%2BFinal.%20pdf?MOD=AJP ER ES

Foundation Center. (2013). Key facts on US foundations: Edition 2013. New York, NY: Author. Retrieved November 26, 2018, from https://www.issuelab.org/ resources/25145/25145.pdf

Global Impact Investing Network (GIIN). (n.d.). What you need to know about impact investing. Retrieved May 26, 2018, from https://thegiin.org/impact-inves ting/need-to-know/#what-is-impact-investing

Höchstädter, A. K., & Scheck, B. (2015). What’s in a name: An analysis of impact investing understandings by academics and practitioners. Journal of Business Ethics, 132(2), 449–475. https://doi.org/10.1007/s10551-014-2327-0

Impact Programme. (2018). Impact Fund. London: UKAid Impact Fund. Retrieved June 27, 2019, from http://www.theimpactprogramme.org.uk/investmen ts-dfid-impact-fund/

International Finance Corporation. (2010). Strategic community investment: A good practice handbook for companies doing business in emerging markets. Washington, DC: Author. Retrieved November 26, 2018, from http://www.ifc. org/wps/wcm/connect/f1c0538048865842b50ef76a6515bb18/12014complete-web. pdf?MOD=AJPERES

Jing, Y., & Gong, T. (2012). Managed social innovation: The case of government sponsored venture philanthropy in Shanghai. Australian Journal of Public Administration, 71(2), 233–245. https://doi.org/10.1111/j.1467-8500.2012.00767.x

John, R. (2014). Virtuous circles: New expressions of collective philanthropy in Asia (Entrepreneurial Social Finance in Asia No. 3). Singapore: Asia Centre for Social Entrepreneurship and Philanthropy, NUS Business School.

Marten, R., & Witte, J. M. (2008). Transforming development: The role of phil anthropic foundations in international development cooperation (GPPi Research Paper Series No. 10). Berlin, Germany: Global Public Policy Institute.

Martens, J., & Seitz, K. (2015). Philanthropic power and development: Who shapes the agenda? Aachen, Berlin, and Bonn, Germany: Bischöfliches Hilfswerk MISEREOR; Evangelisches Werk für Diakonie und Entwicklung Brot für die Welt – Evangelischer Entwicklungsdienst and Global Policy Forum. Retrieved November 26, 2018, from https://www.globalpolicy.org/component/content/article/270-general/52829-philanthropic-power-and-development-who-shapes-the-ag enda.html

Menashy, F. (2016). Private authority or ambiguity? The evolving role of corpora tions and foundations in the Global Partnership for Education. In A. Verger, C. Lubienski, & G. Steiner-Khamsi (Eds.), World yearbook of education 2016: The global education industry (pp. 63–77). Abingdon, UK: Routledge.

Michael & Susan Dell Foundation. (n.d.). Funding. Retrieved September 10, 2018, from https://www.msdf.org/funding/#!/impact_investing/India

Moumné, R., & Saudemont, C. (2015). Overview of the role of private providers in education in light of the existing international legal framework. Investments in pri vate education: Undermining or contributing to the full development of the human right to education? (UNESCO Working Papers on Education Policy N° 1). Paris, France: UNESCO. Retrieved June 27, 2019, from http://unesdoc.unesco.org/ima ges/0024/002438/243823e.pdf

OECD Development Centre. (2014). Venture philanthropy in development: Dynamics, challenges and lessons in the search for greater impact. Paris, France: Author. Retrieved November 26, 2018, from https://www.oecd.org/dev/Venture%20Philan thropy%20in%20Development-BAT-24022014-indd5%2011%20mars.pdf.

O’Flanagan, M., Harold, J., & Brest, P. (2008). The nonprofit marketplace: Bridging the information gap in philanthropy. Menlo Park, CA and New York, NY: The William and Flora Hewlett Foundation and McKinsey & Co. Retrieved November 26, 2018, from https://www.hewlett.org/wp-content/uploads/2016/08/ whitepaper.pdf

Olmedo, A. (2016). Philanthropic governance: Charitable companies, the com mercialization of education and that thing called ‘democracy’. In A. Verger, C. Lubienski, & G. Steiner-Khamsi (Eds.), World yearbook of education 2016: The global education industry (pp. 44–62). Abingdon, UK: Routledge.

Omidyar Network. (2013). Accelerating entrepreneurship in Africa: Understanding Africa’s challenges to creating opportunity-driven entrepreneurship. Redwood City, CA: Author.

Right to Education Project. (2015). The UK’s support of the growth of private educa tion through its development aid: Questioning its responsibilities as regards its human rights extraterritorial obligations (Alternative report presented to the Committee on the Right of the Child (CRC) on the occasion of the consideration of the list of issues related to the fifth periodic report of the United Kingdom of Great Britain and Northern Ireland (UK) during the 72nd session of the Committee). Retrieved November 26, 2018, from http://www.right-to-education.org/sites/right-to-education.org/files/resource-attachments/RTE_Alternative_Report_CRC_ETO_UK_ FINAL_October_2015.pdf

Scarlata, M., & Alemany, L. (2010). Deal structuring in philanthropic venture capital investments: Financing instrument, valuation and covenants. Journal of Business Ethics, 95(S2), 121–145. https://doi.org/10.1007/s10551-011-0851-8

Schölmerich, M. J. (2012). On the impact of corporate social responsibility on poverty in Cambodia in the light of Sen’s capability approach. Asian Journal of Business Ethics, 2(1), 1–33. https://doi.org/10.1007/s13520-012-0016-6

Schwab Foundation for Social Entrepreneurship. (2013). Breaking the binary: Policy guide to scaling social innovation. Geneva, Switzerland: Schwab Foundation for Social Entrepreneurship and the World Economic Forum. Retrieved November 26, 2018, from http://www3.weforum.org/docs/WEF_Breaking_Binary_Policy_ Guide_Scaling_Social_Innovation_2013_2604.pdf

Schwab Foundation for Social Entrepreneurship. (2013). Breaking the binary: Policy guide to scaling social innovation. Geneva, Switzerland: Schwab Foundation for Social Entrepreneurship and the World Economic Forum. Forum. Retrieved November 26, 2018, from http://www3.weforum.org/docs/WEF_Breaking_Binary_Policy_ Guide_Scaling_Social_Innovation_2013_2604.pdf

Scola, B., Soursourian, M., Dominicé, R., Parashkevova, M., & Narayanan, R. (2016). Microfinance funds 10 years of research & practice: A review of CGAP & Symbiotics’ microfinance investment vehicles surveys. Geneva, Switzerland and Washington, DC: Symbiotics and CGAP. Retrieved

November 26, 2018, from http://symbioticsgroup.com/wp-content/uploads/2016/11/201612-Symbiotics_10y MIV_whitepaper.pdf

Srivastava, P., & Baur, L. (2016). New global philanthropy and philanthropic gov ernance in education in a post-2015 world. In K. Mundy, A. Green, R. Lingard, & A. Verger (Eds.), The handbook of global education policy (pp. 433–448). West Sussex, UK: Wiley-Blackwell.

Srivastava, P., & Oh, S.-A. (2010). Private foundations, philanthropy, and partnership in education and development: Mapping the terrain. In S. L. Robertson, K. Mundy, A. Verger, & F. Menashy (Eds.), Public private partnerships in education: New actors and modes of governance in a globalizing world (pp. 460–471). Cheltenham, UK and Northampton, MA: Edward Elgar Publishing. Retrieved June 27, 2019, from https://www.elgaronline.com/abstract/9780857930682.00015.xml

Steer, L., Gillard, J., Gustafsson-Wright, E., & Latham, M. (2015). Non-state actors in education in developing countries: A framing paper: Draft for discussion pre sented at the Annual Research Symposium of the Center for Universal Education. Washington, DC: Centre for Universal Education, Brookings Institution.

Thornley, B., Clark, C., Leijonhufvud, C., Arnoldy, A., Locascio, B., & Dougherty, A. (2016). Navigating impact investing: The opportunity in impact classes. New York, NY: Tideline. Retrieved November 26, 2018, from http://tideline.com/wp content/uploads/Tideline_Navigating_Impact_Investing_Working_Paper.pdf?utm_source=site&utm_medium=download&utm_campaign=downloads

Thomas, D. (2006). A general approach for analyzing qualitative evaluation data. American Journal of Evaluation, 27(2), 237–246. https://doi.org/10.1177/1098 214005283748

United Nations Development Programme. (2014). Barriers and opportunities at the base of the pyramid: The role of the private sector in inclusive develop ment. Istanbul, Turkey: United Nations Development Programme, Istanbul International Center for Private Sector in Development. Retrieved November 26, 2018, from http://www.iicpsd.undp.org/content/istanbul/en/home/library/reports/barriers-and-opportunities-at-the-base-of-the-pyramid---the-role/

United Nations Economic and Social Council. (2012). UN special policy dialogue on 'Private philanthropic organizations in international development cooperation: New opportunities and specific challenges'. Issues note. Development Cooperation Forum Special Dialogue. 27 February 2012. Retrieved November 26, 2018, from. https://www.un.org/en/ecosoc/newfunct/pdf/dcf_philanthropy_issues_note.pdf

Valor, C. (2005). Corporate social responsibility and corporate citizenship: Towards corporate accountability. Business and Society, 110(2), 191–212. https://doi.org/10. 1111/j.0045-3609.2005.00011.x

van Fleet, J. W. (2012). Scaling up corporate social investments in education: Five strategies that work (Global Views Policy Paper No. 2012-01). Washington, DC: Brookings Institution. Retrieved

November 26, 2018, from https://www.brook ings.edu/wp-content/uploads/2016/06/05_corporate_investments_vanfleet.pdf

Verger, A. (2012). Framing and selling global education policy: The promotion of public–private partnerships for education in low-income contexts. Journal of Education Policy, 27(1), 109–130.

World Economic Forum. (2016). Alternative investment 2020: The future of capital for entrepreneurs and SMEs. Geneva, Switzerland: Author. Retrieved November 26, 2018, from http://www3.weforum.org/docs/WEF_AI_FUTURE.pdf